Report of the Joint Select Committee on the Mysore Municipalities Bill, 1962.

(*Presentation.*)

Sri K. PUTTASWAMY (Minister for Municipal Administration).—Sir, I beg to present the Report of the Joint Select Committee on the Mysore Municipalities Bill, 1962

Mr. SPEAKER.—The Report is presented.

MYSORE WILD ANIMALS AND WILD BIRDS PRESERVATION BILL, 1962.

(*Motion to Consider*).

Sri B. RACHIAH (Minister for Forests and Fisheries).—Sir, I beg to move :

> "That the Mysore Wild Animals and Wild Birds Preservation Bill, 1962 be taken into consideration."

Mr. SPEAKER.—Motion moved :

> "That the Mysore Wild Animals and Wild Birds Preservation Bill, 1962 be taken into consideration."

ಶ್ರೀ ಬಿ. ರಾಚಯ್ಯ.—ಸ್ವಾಮೀ, ಭಾರತಾದ್ಯಂತ ವನ್ಯಮೃಗಗಳ ಮತ್ತು ಪಕ್ಷಿಗಳ ಸಂರಕ್ಷಣಾ ಕಾರ್ಯಾರ್ಥವಾಗಿ ಸಪ್ತಾಹವನ್ನು ಆಚರಿತಕ್ಕ ಈ ಸಂದರ್ಭದಲ್ಲಿ ಈ ಒಂದು ಮಸೂದೆಯನ್ನು ಮಾನ್ಯ ಸಭೆಯ ಮುಂದೆ ಮಂಡಿಸಲು ಬಹಳ ಸಂತೋಷಪಡುತ್ತೇನೆ. ಪ್ರಾಚೀನ ಕಾಲದಿಂದಲೂ ಈ ದೈವದತ್ತವಾಗಿ ಬಂದಿರತಕ್ಕ ಅರಣ್ಯಗಳು ಮತ್ತು ಅದರಲ್ಲಿ ವಾಸಮಾಡತಕ್ಕ ವನ್ಯಮೃಗಗಳು ಮತ್ತು ಪಕ್ಷಿಗಳಿಗಾಗಿ ನಮ್ಮ ಪೂರ್ವಿಕರು ಬಹಳ ಹೆಚ್ಚಿನ ಒಂದು ಪ್ರಾಶಸ್ತ್ಯವನ್ನು ಕೊಟ್ಟು ಅವುಗಳನ್ನು ಸಂರಕ್ಷಣೆ ಮಾಡಿಕೊಂಡು ಬಂದಿದ್ದಾರೆ. ಅದರ ಒಂದು ಪ್ರತಿಫಲವಾಗಿ ಸ್ವಲ್ಪಮಟ್ಟಿಗೆ ಹಿಂದೆ ಇದ್ದ ಪ್ರಕಾರದಲ್ಲಿಯೇ ಈ ವನ್ಯಮೃಗಗಳು ಸಮೃದ್ಧಿಯಿಂದ ಜೀವನವನ್ನು ಸಾಗಿಸುತ್ತಿವೆ. ಇತ್ತೀಚೆಗೆ ಈ ವನ್ಯಮೃಗಗಳು ಬೇಟೆ ಮಾಡತಕ್ಕ, ಷಿಕಾರಿ ಮಾಡಿ ಸಂತೋಷವನ್ನು ಪಡೆಯತಕ್ಕ ಜನರು ಒಂದು ಆಕಾಂಕ್ಷೆಯಿಂದ ಈ ವನ್ಯಮೃಗಗಳು ಸಂಪೂರ್ಣವಾಗಿ ಕ್ಷಯಿಸುತ್ತಾ ಬಂದಿವೆ. ಇದಲ್ಲದೆ ಪ್ರಾಚೀನ ಕಾಲದಲ್ಲಿ ಇದ್ದಂತಹ ಅರಣ್ಯ ಸಂಪತ್ತೂ ಕೂಡ ನಾನಾ ರೀತಿಯಿಂದ ಕ್ಷಯಿಸುತ್ತಿವೆ. ಇಲ್ಲಿ ವನ್ಯಮೃಗಗಳಿಗೆ ವಾಸಸ್ಥಾನವಾಗಿರತಕ್ಕ ಅರಣ್ಯ ಸಂಪತ್ತು ಇವೊತ್ತು ವ್ಯವಸಾಯಕೋಸ್ಕರ ಮತ್ತು ದೇಶದ ಕೈಗಾರಿಕೆ ಕ್ಷೇತ್ರಗಳನ್ನು ಸ್ಥಾಪನೆ ಮಾಡತಕ್ಕ ಮತ್ತು ಇನ್ನೂ ಅನೇಕ ರೀತಿಯಿಂದಾಗಿ ಈ ವಿಧದಲ್ಲಿ ಕಾಡು ಕೂಡ ಕ್ಷಯಿಸಿಕೊಂಡು ಬಂದಿವೆ. ವನ್ಯಮೃಗಗಳಿಗೆ ಅವು ನೆಮ್ಮದಿ ಇಲ್ಲದೆ ಬೇಟೆಗಾರರ ಹೊಡೆತಕ್ಕೆ ಬಲಿಯಾಗಿ ಬಹುಮಟ್ಟಿಗೆ ಕಡಿಮೆಯಾಗುತ್ತಿದೆ. ಬೆಳೆಯನ್ನು ಕಾಪಾಡಿಕೊಳ್ಳಬೇಕು ಎನ್ನುವ ನೆಪದಿಂದ ಏನು ಒಂದು ಲೈಸನ್ಸನ್ನು ಪಡೆದುಕೊಂಡಿದ್ದಾರೋ ಅಂತಹ ಜನ ಇವೊತ್ತು ಬೇಟೆಯ ಹವ್ಯಾಸಗಳಿಗೆ ಹೋಗಿ ಮೃಗಗಳನ್ನು ಕೊಲ್ಲುತ್ತಾ ಇರತಕ್ಕ ಸಂದರ್ಭಗಳಿಗೆ ಏನೂ ಕಡಿಮೆ ಇಲ್ಲ. ಈ ಒಂದು ದೃಷ್ಟಿಯಿಂದ ನಮ್ಮ ಇಡೀ ಸಂಸ್ಥಾನದಲ್ಲಿ ವನ್ಯಮೃಗಗಳನ್ನು ಸಂರಕ್ಷಣೆ ಮಾಡತಕ್ಕ ಕಾರ್ಯದಲ್ಲಿ ಸ್ವಲ್ಪಮಟ್ಟಿಗೆ ಉಗ್ರವಾಗಿರಬೇಕು ಮತ್ತು ಅವುಗಳನ್ನು ಸಂರಕ್ಷಣೆ ಮಾಡತಕ್ಕ ಯೋಜನೆಗಳಿಗೆ ಅವಕಾಶವಾಗುವಂತಹ ಕಾನೂನು ಬೇಕು ಎಂದು ಹೇಳಿ ಇಲ್ಲಿ ಈ ವನ್ಯಮೃಗಗಳಿಗಾಗಿ ಐದು ಭಾಗಗಳಲ್ಲಿರತಕ್ಕ ಕಾನೂನುಗಳೇನಿವೆ ಅವುಗಳನ್ನು ಏಕರೂಪತೆಮಾಡಿ ತರುವ ಉದ್ದೇಶದಿಂದ ಈ ವನ್ಯಮೃಗಗಳ ಸಂರಕ್ಷಣೆಯ ಕಾನೂನನ್ನು ತಂದು ಮಂಡಿಸುತ್ತಿದ್ದೇನೆ. ಬಹುಶಃ ಇದು ಅತ್ಯಂತ ಅವಶ್ಯಕವಾಗಿರತಕ್ಕಂಥ ಮತ್ತು ಜನ

ಜೀವನಕ್ಕೆ ಉತ್ತಮವಾಗಿರತಕ್ಕಂಥ ಒಂದು ಕಾನೂನು. ಇದು ಬಹಳ ಸರಳವಾಗಿದೆ. ಹಿಂದೆ 5 ಭಾಗಗಳಲ್ಲಿದ್ದಂಥ ಕೆಲವು ನಿಯಮಗಳನ್ನು ಇದರಲ್ಲಿಯೂ ಕೂಡ ಅಳವಡಿಸಿ, ಸುಮಾರು 61 ಕ್ಲಾಜುಗಳು ಇಲ್ಲ ಇವೆ.

1-00 P.M.

ಮೊದಲನೆಯದಾಗಿ, 2ನೇ ಕ್ಲಾಜಿನಲ್ಲಿ ಡೆಫಿನಿಷನ್ನಿನಲ್ಲಿ, ವನ್ಯಮೃಗ, ವನ್ಯಪಕ್ಷಿ ಮುಂತಾದುದರ ಬಗ್ಗೆ ಅರ್ಥವಿವರಣೆ ಸೇರಿಸಿದೆ. ಆಮೇಲೆ 2ನೆ ಅಧ್ಯಾಯದಲ್ಲಿ ವನ್ಯಮೃಗ ಸಂರಕ್ಷಣೆ ಮಾಡತಕ್ಕಂಥ ಅಧಿಕಾರಿಗಳು ಯಾರಿರಬೇಕು, ಹೇಗಿರಬೇಕು ಅವರು ವನ್ಯಜೀವಿ ವಂಶರಕ್ಷಣಾಧಿಕಾರಿಯವರಿಗೆ ಅಧೀನರಾಗಿರಬೇಕು ಎಂಬುದನ್ನು ಹೇಳಿದೆ. ಅವುಗಳ ಬಗ್ಗೆ ಸಂಬಂಧಪಟ್ಟ ಸಲಹೆಯನ್ನು ಕೊಡತಕ್ಕಂಥ ಒಂದು ಸಲಹಾ ಮಂಡಲಿ ರಚನೆಯಾಗಬೇಕೆಂದು 6ನೆ ಕ್ಲಾಜಿನಲ್ಲಿವೆ. ರಾಜ್ಯದ ಮುಖ್ಯ ಮಂತ್ರಿಗಳು ಆ ಮಂಡಲಿಯ ಅಧ್ಯಕ್ಷರಾಗಿರಬೇಕೆಂದಿದೆ. ಅರಣ್ಯ ಮತ್ತು ವನ್ಯಮೃಗಗಳಿಗೆ ಸಂಬಂಧಪಟ್ಟ ಶಾಖೆಯ ಸಚಿವರು, ಮಂಡಲಿಯ ಉಪಾಧ್ಯಕ್ಷರಾಗಿರುತ್ತಾರೆ; ಕೆಲವು ವನ್ಯ ಮೃಗ ಸಂರಕ್ಷಣಾಧಿಕಾರಿಗಳು ಮತ್ತು ಕೆಲವು ತಜ್ಞರು ಈ ಸಲಹಾಮಂಡಲಿಯಲ್ಲಿರಬೇಕೆಂದಿದೆ; ಈ ಇನ್ನೂ ಕೆಲವು ಸದಸ್ಯರನ್ನೊಳಗೊಂಡಿರುತ್ತದೆ. ಮೂರನೆಯ ಅಧ್ಯಾಯದಲ್ಲಿ ವನ್ಯ ಜೀವಿಗಳ ಬೇಟೆಮಾಡತಕ್ಕಂಥವರಿಗೆ ಯಾವ ರೀತಿ ಲೈಸೆನ್ಸು, ಎಂಥ ಸಂದರ್ಭದಲ್ಲಿ ಕೊಡಬೇಕು ಅನ್ನುವುದನ್ನು ನಿಗದಿ ಮಾಡಿ ಕೆಲವು ಅಧಿಕಾರವನ್ನು ಕೊಟ್ಟಿದೆ. ಅದು ಬಿಟ್ಟರೆ, 4ನೆಯದರಲ್ಲಿ ಯಾವಯಾವ ಪ್ರದೇಶ ಯಾವಯಾವ ಸಂದರ್ಭದಲ್ಲಿ ವನ್ಯಮೃಗಾಶ್ರಯ ಎಂದು ಘೋಷಿಸಬಹುದು, ಯಾವ ಪ್ರದೇಶ ಬೇಟೆಗೆ ಕಾನೂನು ಬಾಹಿರವಾಗಿರುತ್ತದೆ, ಬೇಟೆ ನಿಷೇಧಿಸುವುದು ಮುಂತಾದ ವಿಚಾರಗಳನ್ನು ಹೇಳಿವೆ. ಸಂಸ್ಥಾನದ ಯಾವಯಾವ ಭಾಗವನ್ನು ವನ್ಯ ಮೃಗಗಳ ಸಂರಕ್ಷಣಾಲಯ, ಅದರ ವಿಸ್ತೀರ್ಣವೇನು ಅಂತ ಹೇಳಿ ಡಿಕ್ಲೇರ್ ಮಾಡತಕ್ಕಂಥ ಅಧಿಕಾರವನ್ನು ಡೆಪ್ಯುಟಿ ಕಮಿಶನರಿಗೆ ಕೊಟ್ಟು ಒಂದು ನಿಯಮಾವಳಿಯನ್ನು ಇದರಲ್ಲಿ ಅಳವಡಿಸಿದೆ. ಅದಕ್ಕೆ ಬೇಕಾಗಿರತಕ್ಕಂಥ ಕಾಯಿದೆಗಳನ್ನು ಕೂಡ ಕೊಡಲು ಉದ್ದೇಶಿಸಲಾಗಿದೆ. ಆರನೆಯ ಅಧ್ಯಾಯದಲ್ಲಿ ಕಾಡಾನೆಗಳನ್ನು ಯಾವ ಸಂದರ್ಭದಲ್ಲಿ ಹಿಡಿಯುವುದು ಮತ್ತು ಕೊಲ್ಲುವುದು ಅನ್ನುವುದನ್ನು ಕೊಟ್ಟಿದೆ. ಜನಜೀವನಕ್ಕೆ ಬಹಳ ತಂಟೆ ಮಾಡತಕ್ಕಂಥ ಮತ್ತು ತೊಂದರೆಯಾಗಿರತಕ್ಕಂಥ ಪುಂಡು ಆನೆ ಇದ್ದರೆ, ಅದನ್ನು ಹಾಗೆ ಡಿಕ್ಲೇರ್‌ಮಾಡಿ ಕೊಲ್ಲುವುದಕ್ಕೆ ಅವಕಾಶ ಮಾಡಿಕೊಡುವ ನಿಯಮವನ್ನು ಇಲ್ಲಿ ಸೇರಿಸಿದೆ. ಅಧ್ಯಾಯ 6ರಲ್ಲಿ ಟ್ರೋಫಿ ವ್ಯವಹಾರಗಳನ್ನು ನಡೆಸತಕ್ಕಂಥದ್ದು ಯಾವರೀತಿ ಇರಬೇಕು. ಅದರ ಬಗ್ಗೆ ಕಾಯಿದೆಗಳು ಏನಿರಬೇಕು ಎಂದು ನಿರ್ಧರಿಸಿ ಕೆಲವು ನಿಯಮಗಳನ್ನು ಸೇರಿಸಿದೆ.

ಹೀಗೆ, ಇದರಲ್ಲಿರತಕ್ಕಂಥಾದ್ದೆಲ್ಲಾ ಬಹಳ ಸರಳವಾಗಿದೆ. ಈ ಪ್ರಕೃತಿಯ ಒಂದು ಸಮತೋಲನವನ್ನು ಸರಿದೂಗಿಸಬೇಕಾದರೆ ಎಲ್ಲ ವಿಧವಾದ ಪ್ರಾಣಿಗಳೂ ಬೇಕು. ಈ ಸೃಷ್ಟಿಯಲ್ಲಿ ಸಸ್ಯಾಹಾರಿಗಳಿಗೂ ಮಾಂಸಾಹಾರಿಗಳಿಗೂ ಒಂದು ಬ್ಯಾಲೆನ್ಸ್ ಇಲ್ಲದಿದ್ದರೆ ಮನುಷ್ಯನಿಗೆ ಬೇಕಾಗಿರತಕ್ಕಂಥ ಆಹಾರಪದಾರ್ಥಗಳನ್ನು ಸಂರಕ್ಷಿಸುವುದಕ್ಕಾಗುವುದಿಲ್ಲ; ಕ್ರಿಮಿಕೀಟಗಳನ್ನು ತಡೆಗಟ್ಟಬೇಕಾಗಿದ್ದರೆ ಪ್ರಕೃತಿಯ ಈ ಸಮತೋಲನದ ಸಹಾಯ ಬೇಕು. ಅದೇರೀತಿ ವುಗ್ರಾಣಗಳಿಗೆ ಮಿಡತೆ, ಹುಳುಗಳು ಮತ್ತು ಹೆಗ್ಗಣಗಳಿಂದ ತೊಂದರೆಯಾಗದ ರೀತಿಯಲ್ಲಿ ನೋಡಿಕೊಳ್ಳಬೇಕಾದ ಒಂದು ಸಂದರ್ಭವೂ ಇದೆ. ಮಾಂಸಾಹಾರಿ ಪ್ರಾಣಿಗಳ ಸಂಖ್ಯೆ ಹೆಚ್ಚಾದರೆ, ಆವಾಗ ಸಸ್ಯಾಹಾರಿಗಳ ಸಂಖ್ಯೆ ಕೂಡ ಕಡಿಮೆಯಾಗುತ್ತದೆ. ಅದಕ್ಕೋಸ್ಕರ ಸೃಷ್ಟಿದತ್ತವಾಗಿ ಬಂದಿರತಕ್ಕಂಥ ಈ ಒಂದು ಸಮತೋಲನವನ್ನು ಕಾಪಾಡಿಕೊಂಡು ಬಂದರೆ ಮಾನವನ ಜೀವನವನ್ನು ಸುಗಮವಾಗಿ ನಡೆಸಿಕೊಂಡು ಬರುವುದಕ್ಕೆ ಅವಕಾಶವಾಗುತ್ತದೆ.

ಈ ಒಂದು ದೃಷ್ಟಿಯಿಂದ, ಈ ವನ್ಯಮೃಗಗಳನ್ನೂ ಮತ್ತು ಪಕ್ಷಿಗಳನ್ನೂ ಕಾಪಾಡುವುದೂ, ರಕ್ಷಣೆ ಮಾಡುವುದೂ ಸರಕಾರದ, ಸಾರ್ವಜನಿಕರ ಎಲ್ಲರ ಕರ್ತವ್ಯ. ಈ ಒಂದು ಕೆಲಸದಲ್ಲಿ ಎಲ್ಲರ ಸಹಕಾರ ಅತ್ಯಗತ್ಯವಾಗಿ ಬೇಕಾಗಿದೆ. ಈ ದೃಷ್ಟಿಯಿಂದ ಮಾನ್ಯಸಭೆಯ ಸದಸ್ಯರೆಲ್ಲರೂ ಕೂಡ ಇದರ ಉಪಕೃತ್ಯತೆಯನ್ನು ಬಹಳ ಮಟ್ಟಿಗೆ ಅರಿತವರಾದ್ದರಿಂದ, ಈ ಮಸೂದೆಗೆ ತಮ್ಮ ಸಂಪೂರ್ಣ ಬೆಂಬಲವನ್ನು ಕೊಟ್ಟು ಇದು ಕಾಯಿದೆಯಾಗಿ ಮಾಡಿ ದೇಶದಲ್ಲಿ ನಶಿಸಿ ಹೋಗುತ್ತಿರುವ ವನ್ಯ ಮೃಗಗಳನ್ನೂ ಪಕ್ಷಿಗಳನ್ನೂ ಕಾಪಾಡುವುದಕ್ಕೆ ಸಹಾಯಕರಾಗಬೇಕು ಎಂದು ಕೇಳಿಕೊಂಡು, ಈ ಮಸೂದೆಯನ್ನು ನಾನು ಮಂಡಿಸುತ್ತೇನೆ.

†**Sri V. S. PATIL** (Belgaum I).—This is one of the good bills introduced on the floor of this House. The main object of this bill is to protect the wild animals and wild birds from indiscriminate killing or massacring

(SRI V. S. PATIL)

by people. No doubt we have to preserve wild life in our country but at the sametime there is another aspect from which this matter has to be considered.

There are positive clauses in this bill by which the wild animals and birds are to be protected but primarily this is a bill which says "don't do a particular thing". The bill emphasises on the 'dont's' rather than the 'do's'. The wild life is found in aboundance only in forest areas. The persons who reside amidst these forests are in most cases unprovided for for their maintenance. Their lands are situated in a track where there is heavy rainfall and the soil and substance of the land is washed away and it becomes very difficult for them to maintain themselves, solely on the produce from the land. Therefore they are compelled to take recourse to some other means. In this bill sport is given much more value than the actual maintenance of people who are residing in these areas. There is no provision in this bill or in any other bill brought before this House to see that the people living in these areas are maintained well. As they are poorly fed by the resources at their disposal, they take to this sort of killing wild animals and birds. This important aspect cannot be ignored. Government simply imposes a ban on the killing of animals whether they are killed for sustenance or mere sport and job. So far as the later aspect is concerned, killing for sport and joy is allowed by permits and licences by people who are well-to-do and kill for sport.

These persons do not come from the forest area, but they come from outside the forest area and they simply want to kill the animals for joy, which they call sport. Why should this be allowed ? No doubt, it is a sort of income to the Government. But, such sort of income from a particular section of the community, which is well of and which can waste money for simple joy, and to encourage such people, I think, Sir, is not befitting in a socialistic State. The Ruling Party professes that their aim is for a Socialist State. Hence, I submit that the old method of the British Government to have these sports for the big people who can spend thousands of rupees even for a day's *shikar*, should not be continued hereafter if the Government wants to protect these wild animals and wild birds. That is one thing which I should like to place before this House. The second thing is that something must be done to remove the people who are residing in small huts, hamlets and small villages in the forest area and make provision for them to live outside the jungle area or forest area with lands and other means for their subsistence. If we do not make this, then it is no use passing a law and giving a weapon in the hands of the Government officers to harrass people, who may be found within the forest area. We know Sir, and everybody in this House including the Hon'ble Ministers know that in most of this game the wild animals and wild birds are killed not by the sportsmen, but by the Government officers themselves. I had an occasion to see an Animal Sanctuary when I halted there during the night time. The person in charge of that Sanctuary gave us non-vegetarian food. I asked him as to how he got us non-vegetarian food with a particular kind of flush within five or six hours when there is complete prohibition for killing an animal. He laughed and said: 'Sir, you just enjov and go away'. This is the way in which the officers are behaving. They are the persons who are mostly responsible for the killing of these birds and animals, and that is why very stringent measures must be taken against such persons if you want to make this Act a grand success. Once upon a time, I was also a shikari and I have killed several animals. Since our independence I have given it up because of the 'Ahimsaraj'. But, I know the ways and means that are being taken by these *shikaries*. They use the Torch light by which these wild animals are massacred eevn in one night. One gunman with a torch head-light can kill not less than two dozens of animals within 5 or 6 hours. So my submission is that no torch light, which has got a power beyond three cells, should be allowed to enter into the forest area and if anybody takes that, that itself must be made punishable. That alone will put some stop to the massacring of these animals. Mere estsblishment of a Committee at Bangalore with the Chief Minister as Chairman or some other Minister as Chairman, will be of no use at all. It is better to acquire possession of lands of the people living in forest area and give them some lands outside that area and make provision for their subsistence outside. The Government must also see that there is a stringent check upon the officers of the Forest Department, who do not yield to allurement of killing these animals because there will be nobody to check on them. These are the things which are required to be seen and there are other things in so many clauses which have got to be examined. That is why I expected this Bill to go to a Select Committee. It appears that the Government is not willing to send this Bill to a Select Committee. There are some amendments moved which will explain our position to the Government. I feel the Government will have to explain the schedules, because many names of animals have not at all been included. That will require some careful consideration, and I hope the Hon'ble Minister will do his best to see that the Act is fully implemented.

† **Sri VIDYADHAR GURUJI SAYANNA** (Gurmitkal).—

(Spoke in Hindustani).

ಶ್ರೀ ಟಿ. ಮಾದಯ್ಯ ಗೌಡ (ರಾಮನಗರಂ).—ಸ್ವಾಮಿ, ಈಗ ನಮ್ಮ ಮುಂದೆ ಇರತಕ್ಕಂಥ ವನ್ಯಮೃಗಗಳ ಹಾಗೂ ಕಾಡು ಪಕ್ಷಿಗಳ ಸಂಬಂಧವಾಗಿ ಇರತಕ್ಕಂಥ ಈ ಮಸೂದೆಯನ್ನು ಸಕಲರೂ ಹೃತ್ಪೂರ್ವಕವಾಗಿ ಸ್ವಾಗತಿಸಿದ್ದಾರೆ. ಈ ಭೂಮಿ ಮನುಷ್ಯನಿಗೆ ಹೇಗೆ ಸೇರಿದೆಯೋ ಹಾಗೆಯೇ ಎಲ್ಲ ವನ್ಯ ಮೃಗಗಳಿಗೆ, ಪಶು ಪಕ್ಷಿಗಳಿಗೆ ಸೇರಿದೆ. ಎಲ್ಲರಿಗೂ ಜೀವಿಸಲು ಅವಕಾಶವಿದೆ. ಮನುಷ್ಯ ಬುದ್ಧಿಯಲ್ಲ ಸ್ವಲ್ಪಮಟ್ಟಿಗೆ ಹೆಚ್ಚು ಶಕ್ತಿವಂತನಾದುದರಿಂದ ಮೃಗಗಳನ್ನೂ ಪಕ್ಷಿಗಳನ್ನೂ ತನ್ನ ಹತೋಟಿಯಲ್ಲಿಟ್ಟುಕೊಳ್ಳಲು ಪ್ರಯತ್ನಮಾಡುತ್ತಿದ್ದಾನೆ. ತತ್ಪರಿಣಾಮವಾಗಿ ಮನುಷ್ಯನಿಗೆ ಬೇಕಾಗಿರತಕ್ಕಂಥ ಅತ್ಯಂತ ಉಪಯುಕ್ತವಾದಂಥ ಮೃಗಗಳನ್ನೂ ಪಕ್ಷಿಗಳನ್ನೂ ಹಿಂಸೆಮಾಡಿ ಕೊಲ್ಲುವುದಕ್ಕೆ ಪ್ರಯತ್ನಮಾಡುತ್ತಾನೆ. ಅದನ್ನು ಅತಿಕ್ರಮಿಸಿದರೆ ಮನುಷ್ಯನಿಗೆ ಕೇಡು ಉಂಟಾಗುತ್ತದೆ ಎನ್ನುವುದರಲ್ಲ ಏನೂ ಸಂದೇಹವಿಲ್ಲ. ಈ ಕಾರಣದಿಂದ ಸರ್ವೇಸಾಧಾರಣವಾಗಿ ಪಶುಪಕ್ಷಿಗಳನು ಕಾಪಾಡಿಕೊಂಡು ಬರುವುದು ಮನುಷ್ಯ ಧರ್ಮವಾಗಿದೆ. ಇದನ್ನು ತಿಳಿದುಕೊಳ್ಳ

(ಶ್ರೀ ಟಿ. ಮಾದಯ್ಯ ಗೌಡ)

ಬೇಕು. ಪಶು ಪಕ್ಷಿಗಳ ಜೀವನದಿಂದ ಮನುಷ್ಯನಿಗೆ ಅನೇಕ ಬಗೆಯಿಂದ ಪ್ರಯೋಜನವಾಗುತ್ತದೆ. ಪಕ್ಷಿಗಳು ಅರಣ್ಯದಲ್ಲಿ ಸ್ವೇಚ್ಛೆಯಿಂದ ತಿರುಗಾಡುತ್ತವೆ. ಅವು ಹಾಗೆ ತಿರುಗಾಡದಿದ್ದರೆ ನಮಗೆ ಆಹಾರ ಪದಾರ್ಥಗಳು ಇಷ್ಟರ ಮಟ್ಟಿಗೆ ದೊರೆಯಲು ಅವಕಾಶವಾಗುವುದಿಲ್ಲ. ಸರ್ವೇಸಾಧಾರಣವಾಗಿ ಇದು ರೈತನಿಗೆ ಗೊತ್ತು ಇರತಕ್ಕಂಥ ವಿಚಾರ. ಹೊಲದಲ್ಲಿ ಗದ್ದೆಗಳಲ್ಲಿ ಬರತಕ್ಕಂಥ ಚಿಟ್ಟೆ ಹಾವಳಿ ತಪ್ಪಿಸಲು ಪಕ್ಷಿಗಳು ಬೇಕೇಬೇಕು. ಈ ಚಿಟ್ಟೆ ಹಾವಳಿ ಹೋಗಲಾಡಿಸಲು ಮತ್ತು ಬೆಳೆ ಉತ್ತಮ ರೀತಿಯಲ್ಲಿ ಕಾಪಾಡಿಕೊಳ್ಳಲು ಮನುಷ್ಯ ಎಷ್ಟೇ ಪ್ರಯತ್ನ ಮಾಡಿದರೂ ಅದು ಸಫಲವಾಗಲಾರದು ಎಂದು ನಾನು ಖಂಡಿತವಾಗಿ ಹೇಳಬಲ್ಲೆ. ನಮ್ಮ ಪ್ರದೇಶದಲ್ಲಿ ಭತ್ತಕ್ಕೆ ಬೀಳತಕ್ಕಂಥ ಚಿಟ್ಟೆ ಹಾವಳಿಯನ್ನು ಆಕಾಶದಲ್ಲಿ ಹಾರಾಡುವ ಅನೇಕ ಪಕ್ಷಿಗಳು ಬಂದು ಹಾರಿಸಿಕೊಂಡು ಹೋಗುತ್ತವೆ. ಹಣ್ಣಿನ ಗಿಡಗಳಿಗೆ ಅನೇಕ ಸಲ ಹುಳಗಳು, ಚಿಟ್ಟೆಗಳು ಬಂದು ಬೆಳೆ ನಷ್ಟವಾಗುವುದು ನಮ್ಮ ಅನುಭವಕ್ಕೆ ಬರುತ್ತಾ ಇದೆ. ಇದರ ನಿವಾರಣೆಗೆ ವನ್ಯ ಸಂಪತ್ತು ಜಾಸ್ತಿ ಮಾಡತಕ್ಕದ್ದು ಅಗತ್ಯ. ಮನುಷ್ಯ ಹೆಚ್ಚಾಗಿ ಬೆಳೆಯಬೇಕಾದರೆ ಕಾಡು ಬೇಕು. ಮೈದಾನ ಪ್ರದೇಶದಲ್ಲಿ ಕೂಡ ಹಣ್ಣಿನ ಗಿಡಗಳನ್ನು ಬೆಳೆಸಬೇಕಾಗುತ್ತದೆ. ಕಾಡನ್ನು ಬೆಳೆಸುವುದರಿಂದ ಪಶು ಪಕ್ಷಿಗಳ ಮೂಲಕ ಹೆಚ್ಚು ಸಹಾಯ ದೊರೆಯುತ್ತದೆ ಎಂಬುದು ನಿರ್ವಿವಾದ ವಿಚಾರ. ಹಾಗೇನೆ ಕಾಡಿನಲ್ಲಿ ಇರತಕ್ಕಂಥ ಅನೇಕ ಮೃಗಗಳಿಂದ ನಮಗೆ ಉಪಯುಕ್ತವಾದಂಥ ದಂತ, ಉಣ್ಣೆ ಮುಂತಾದ ಬೆಲೆಯುಳ್ಳ ಪದಾರ್ಥಗಳು ದೊರೆಯುತ್ತವೆ. ಈ ಕಾರಣದಿಂದ ಕಾಡಿನಲ್ಲಿರತಕ್ಕಂಥ ಅನೇಕ ಉಪಯುಕ್ತ ಜಂತುಗಳನ್ನು ಕಾಪಾಡಿಕೊಳ್ಳಬೇಕಾಗುತ್ತದೆ.

1-30 P.M.

ವನ್ಯ ಮೃಗಗಳು ಜಾಸ್ತಿಯಾದರೆ ಅನೇಕ ವಿಧದಲ್ಲಿ ಮನುಷ್ಯನಿಗೆ ಕೇಡು ಆಗುತ್ತದೆ. ಅಂತಹ ಸಂದರ್ಭದಲ್ಲಿ ಅವುಗಳನ್ನು ಮಿತಗೊಳಿಸಿ ದೇಶ ಸಂರಕ್ಷಣೆ ಮಾಡಬೇಕೆನ್ನುವುದು ಬಹಳ ಕಾಲದಿಂದಲೂ ಕೂಡ ನಮ್ಮ ದೇಶದಲ್ಲಿ ಬಂದಿರತಕ್ಕ ಪದ್ಧತಿ. ಯಾವುದಾದರೂ ದೇಶದಲ್ಲಿ ವನ್ಯ ಮೃಗಗಳು ವಿಶೇಷವಾಗಿ ಹೆಚ್ಚಾಗಿ ಅವು ಊರುಗಳ ಮೇಲೆ ನುಗ್ಗಿ ಅಲ್ಲಿರತಕ್ಕ ಪಶುಪಕ್ಷಿಗಳನ್ನು ಹಾಳು ಮಾಡುವುದಾದರೆ ಪ್ರಜೆಗಳು ರಾಜರುಗಳಿಗೆ ಹೇಳಿ ಅವರು ಅವನ್ನು ಸಂಹಾರ ಮಾಡುತ್ತಾ ಇದ್ದರು ಎಂಬುದನ್ನು ಪುರಾಣಗಳಲ್ಲಿ ಓದಿರತಕ್ಕ ವಿಷಯ. ಈಚೆಗೆ ಕಾಡುಗಳು ಕಡಿಮೆಯಾಗಿರತಕ್ಕ ಸನ್ನಿವೇಶದಲ್ಲಿ ಹಾಗೆ ಅತಿಯಾಗಿ ಊರುಗಳ ಮೇಲೆ ಕಾಡುಮೃಗಗಳು ಹಾವಳಿ ಮಾಡುತ್ತಾ ಇರುವುದು ಅತಿ ವಿರಳ, ಆದರೂ ಕೂಡ ಒಂದು ಉದಾಹರಣೆ ಹೇಳಬೇಕಾದರೆ ರಾಮನಗರ ತಾಲ್ಲೂಕಿನಲ್ಲಿ ಹೆಚ್ಚು ಕಾಡು ಇಲ್ಲ. ಅಲ್ಲಿ ಕರಡಿಗಳಿಂದ ಆದ ಅನಾಹುತ ಎಂದರೆ ಅನೇಕ ಸಾವಿರಾರು ರೂಪಾಯಿಗಳು ನಷ್ಟವಾಯಿತು. ನಾನು ಸರ್ಕಾರದವರಿಗೆ ಮನವಿ ಸಲ್ಲಿಸಿದ ಮೇಲೆ ಸರ್ಕಾರದವರು ಅರಣ್ಯ ಇಲಾಖೆಯವರಿಗೆ ತಿಳಿಸಿ ಅರಣ್ಯ ಇಲಾಖೆಯವರು ಕೆಲವರು ಬಂದು ಆ ಕರಡಿಗಳ ಹಾವಳಿಯನ್ನು ತಪ್ಪಿಸಿದರು. ಹೀಗೆಯೇ ಅನೇಕ ಸಂದರ್ಭಗಳಲ್ಲಿ ಆನೆಗಳು ಊರಿನೊಳಗೇ ನುಗ್ಗಿ, ಜಮೀನಿನ ಮೇಲೆ ನುಗ್ಗಿ ತೊಂದರೆಪಡಿಸುವುದು ಅಲ್ಲಿನ ಜನರಿಗೆ ಹಿಂಸೆ ಮಾಡುತ್ತಾ ಇರುವುದು, ಪಶುಗಳನ್ನು ನಾಶಮಾಡುತ್ತಾ ಇರುವುದನ್ನು ಕೇಳಿದ್ದೇವೆ. ಅವು ಪಶುಗಳನ್ನು ಮಾತ್ರ ನಾಶಪಡಿಸುವುದು ಇರಲಿ ಮನುಷ್ಯರೂ ಕೂಡ ಅವುಗಳ ಹಾವಳಿಗೆ ತುತ್ತಾಗುತ್ತಾರೆ ಎನ್ನುವುದು ಅನೇಕ ಸಂದರ್ಭಗಳಲ್ಲಿ ವ್ಯಕ್ತಪಟ್ಟಿದೆ. ಆದರೂ ಕೂಡ ಅವುಗಳ ಸಂರಕ್ಷಣೆಗೆ ಅವಶ್ಯಕವಾದ ಸಲಹೆಗಳನ್ನು ನಾವು ಮಾಡಬೇಕಾಗಿ ಬರುತ್ತದೆ. ಆದ್ದರಿಂದ ಈಗ ನಮ್ಮ ಮುಂದೆ ತಂದಿರತಕ್ಕ ಮಸೂದೆ ಸಾಧುವಾಗಿದೆ, ಎಲ್ಲಾ ವಿಷಯದಲ್ಲೂ ಸ್ತುತ್ಯಾರ್ಹವಾಗಿದೆ. ಆದರೆ ಕೆಲವು ಕ್ಲಾಜುಗಳಲ್ಲಿ ಸ್ವಲ್ಪ ಬದಲಾವಣೆಗಳಾಗಬೇಕಾದ್ದು ಅವಶ್ಯಕ ಎಂದು ಕಂಡುಬಂದಿದೆ. ಉದಾಹರಣೆಗೆ ಹೇಳುವುದಾದರೆ ಗೇಮ್ಸ್ ಆಫೀಸರ್ ಎಂದು ಇರುವವರಿಗೆ ಬಹಳ ಹೆಚ್ಚಿನ ಅಧಿಕಾರವನ್ನು ಕೊಟ್ಟಿದ್ದೀರಿ, ಅವನಿಗೆ ಇರತಕ್ಕ ಅಧಿಕಾರ ಮತ್ತು ಅವನ ಕರ್ತವ್ಯಗಳನ್ನು ನೋಡಿದರೆ ಭಯವಾಗುತ್ತದೆ. ಆದ್ದರಿಂದ ಅದನ್ನು ಸ್ವಲ್ಪ ಬದಲಾವಣೆ ಮಾಡುವುದು ಯೋಗ್ಯ, ಇದನ್ನು ಸೆಲೆಕ್ಟ್ ಕಮಿಟಿಗೆ ಕಳುಹಿಸುವುದಕ್ಕೆ ಸಾಧ್ಯವಿಲ್ಲದಿದ್ದರೆ ತಮ್ಮ ಅನುಭವದಿಂದ ತಿಳಿದಿಕೊಂಡು ಬದಲಾವಣೆ ಮಾಡಬೇಕೆಂದು ಹೇಳುತ್ತೇನೆ.

ಪಾಶ್ಚಿಮಾತ್ಯ ದೇಶಗಳಲ್ಲಿ ಈ ವನ್ಯ ಮೃಗಗಳ ರಕ್ಷಣೆಗೆ ಅನೇಕ ಉಪಯುಕ್ತವಾದ ಕಾರ್ಯಗಳನ್ನು ಕೈಕೊಂಡಿದ್ದಾರೆ, ಡೆನ್‌ಮಾರ್ಕ್‌ನಲ್ಲಿ ಸಾವಿರಾರು ಎಕರೆ ಪ್ರದೇಶದ ಸುತ್ತಲೂ ಕಾಂಪೌಂಡ್ ಹಾಕಿ ಮಧ್ಯದಲ್ಲಿ ಜಿಂಕೆ, ಸಾರಂಗ ಮುಂತಾದ ಅನೇಕ ಮೃಗಗಳು ವಾಸ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ, ಅವು ಅಲ್ಲಿ ಸ್ವೇಚ್ಛೆಯಾಗಿ ತಾವೇ ತಾವಾಗಿ ಹೋಗುತ್ತಾ ಇರುತ್ತವೆ. ಅವನ್ನು ಜನರು ನೋಡಿ ಆನಂದಪಡುತ್ತಾರೆ. ನಮ್ಮ ದೇಶದಲ್ಲೂ ಕೂಡ

ಜೂ ಗಾರ್ಡನ್ ಮಾಡಿ ಅಲ್ಲಿ ವನ್ಯ ಮೃಗಗಳನ್ನು ಇಟ್ಟಿದ್ದಾರೆ. ಅಲ್ಲಿ ಅವು ಯಾವ ರೀತಿ ಜೀವನ ಮಾಡುತ್ತವೆ, ಅವುಗಳ ಸ್ಥಿತಿಗತಿಗಳು ಹೇಗೆ? ಅವುಗಳನ್ನು ಯಾವ ರೀತಿ ಕಾಪಾಡಬೇಕು ಎನ್ನುವುದಕ್ಕೆ ಒಂದು ವಿಧದಲ್ಲಿ ವಿಮರ್ಶೆಮಾಡುವುದಕ್ಕೂ ಮತ್ತು ನೋಡಿ ಆನಂದ ಪಡುವುದಕ್ಕೂ ಅವಕಾಶ ಮಾಡಿಕೊಂಡಿದ್ದಾರೆ. ಹೀಗೆ ಪಕ್ಷಿಗಳು ಮತ್ತು ಮೃಗಗಳಿಂದ ಉಂಟಾಗತಕ್ಕ ಆನಂದದ ದೃಷ್ಟಿಯಿಂದಲೂ ಕೂಡ ಪಶು ಪಕ್ಷಿಗಳನ್ನು ಉತ್ತಮ ರೀತಿಯಲ್ಲಿ ಕಾಪಾಡುವುದು ಅಗತ್ಯ ಎಂದು ಅನಿಸುತ್ತದೆ.

ಮತ್ತೊಂದು ವಿಚಾರವನ್ನು ಹೇಳಿ ಮುಗಿಸುತ್ತೇನೆ. ಆನೆಗಳ ವಿಚಾರದಲ್ಲಿ ಈ ಕಾನೂನಿನಲ್ಲಿ ಸ್ವಲ್ಪಮಟ್ಟಿನ ಬದಲಾವಣೆ ಅಗತ್ಯ ಎಂದು ಅನಿಸುತ್ತದೆ. ದುಷ್ಟವಾಗಿರತಕ್ಕ ಒಂದು ಆನೆ—ಅದು ಮನುಷ್ಯರ ಮೇಲೆ ಬೀಳತಕ್ಕ ಸಂದರ್ಭದಲ್ಲೂ ಕೂಡ ಅದನ್ನು ಕೊಲ್ಲುವುದಕ್ಕೆ ಈ ಕಾನೂನಿನಲ್ಲಿ ಅವಕಾಶವಿದ್ದ ಹಾಗೆ ಇಲ್ಲ. 200 ಮೈಲಿ ದೂರದಲ್ಲಿದ್ದರೂ ಕೂಡ ಬೆಂಗಳೂರಿಗೆ ಬಂದು ಚೀಫ್ ಕನ್‌ಸರ್ವೇಟೀವ್ ಆಫೀಸರಿಗೆ ಅರ್ಜಿ ಕೊಟ್ಟು, ಅವರಿಂದ ಪರ್ಮಿಟ್ ಪಡೆದು ಆ ಮೇಲೆ ಅದನ್ನು ಕೊಲ್ಲಬೇಕು. ಇದನ್ನು ಸ್ವಲ್ಪ ಬದಲಾವಣೆ ಮಾಡಬೇಕಾದ್ದು ಅಗತ್ಯ ಎಂದು ನನಗೆ ಅನಿಸುತ್ತದೆ.

ವೈಲ್ಡ್ ಲೈಫ್ ಪ್ರಿಸರ್ವೇಷನ್‌ಗೆ ಒಂದು ಮಂಡಲಿಯನ್ನು ಏರ್ಪಾಡು ಮಾಡಬೇಕೆಂದು ಯೋಚನೆ ಮಾಡಿದ್ದೀರಿ. ಆ ಮಂಡಲಿಯಲ್ಲಿ ಸುಮಾರು 13 ಜನ ಸದಸ್ಯರು ಇದ್ದಾರೆ ಆದರಲ್ಲಿ ಸೆಕ್ರೆಟರಿ ಒಬ್ಬರು ಇದ್ದಾರೆ. ವೈಲ್ಡ್ ಲೈಫ್ ಪ್ರಿಸರ್ವೇಷನ್ ಆಫೀಸರು ಸೆಕ್ರೆಟೆರಿ—ಮತ್ತು ಚೀಫ್ ವೈಲ್ಡ್ ಲೈಫ್ ಪ್ರಿಸರ್ವೇಷನ್ ಆಫೀಸರು ಒಬ್ಬರು ಮೆಂಬರು ಆಗಿದ್ದಾರೆ, ಈ ರೀತಿ ಇಬ್ಬರು ಇರುವುದಕ್ಕೆ ಅವಕಾಶವಿದೆಯೇ ಅಥವಾ ಅವೆರಡೂ ಒಂದೇ ಎಂಬುದು ಸರಿಯಾಗಿ ವ್ಯಕ್ತಪಡುವುದಿಲ್ಲ. ಇದನ್ನು ಸ್ವಲ್ಪ ಬದಲಾವಣೆ ಮಾಡುವುದು ಅಗತ್ಯ ಮತ್ತು ವೈಲ್ಡ್ ಲೈಫ್ ಬೋರ್ಡಿಗೆ ಇರತಕ್ಕ ಕರ್ತವ್ಯವೇನು ಎಂದರೆ ಅವರು ಸರ್ಕಾರದವರಿಗೆ ತಿಳಿವಳಿಕೆ ಕೊಡುವುದು ಅಷ್ಟೇ ವಿನಹ ಇನ್ನೇನೂ ಇರುವುದಿಲ್ಲ. ಹೀಗಿರುವಾಗ ಅವರಿಗೆ ಹೋಗತಕ್ಕ ಬರತಕ್ಕ ಭತ್ಯ ಅಲ್ಲದೆ ಹೆಚ್ಚಿಗೆ ಹಣ ಏಕೆ ಬೇಕೆನ್ನುವುದು ಅರ್ಥವಾಗಲಿಲ್ಲ. ಒಟ್ಟಿನಲ್ಲಿ ಮನುಷ್ಯನಿಗೆ ಉಪಯುಕ್ತವಾದ ಆಹಾರದ ಬೆಳೆಯನ್ನು ಸಂರಕ್ಷಣೆ ಮಾಡತಕ್ಕ ಪಕ್ಷಿಗಳು, ಮನುಷ್ಯನಿಗೆ ಅನೇಕ ವಿಧದಲ್ಲಿ ಅನೇಕ ಉಪಯುಕ್ತವಾದ ಬೆಲೆಬಾಳತಕ್ಕ ವಸ್ತುಗಳನ್ನು ಒದಗಿಸುವ ಪ್ರಾಣಿಗಳನ್ನು ಕಾಪಾಡತಕ್ಕ ಈ ಕಾನೂನು ಅತ್ಯಂತ ಅವಶ್ಯಕ. ಆ ದೃಷ್ಟಿಯಿಂದ ನಮ್ಮ ಮುಂದೆ ಇರತಕ್ಕ ಈ ಕಾನೂನು ಸ್ವಾಗತಾರ್ಹವಾಗಿದೆ ಇದನ್ನು ಒಪ್ಪಿಕೊಳ್ಳಬಹುದು ಎಂದು ಸೂಚನೆ ಮಾಡಿ ನನ್ನ ಭಾಷಣವನ್ನು ಮುಗಿಸುತ್ತೇನೆ.

† ಶ್ರೀ ಗೋಪಾಲ ಸಾಲೆನ್ನ (ಮೂಡಬಿದ್ರಿ).—ಸ್ವಾಮಿ, ಈ ಮಸೂದೆ ಬಹಳ ಉಪಯುಕ್ತವಾದ ಮಸೂದೆ. ಇದರಲ್ಲಿ ಒಂದು ಕಡೆ ಅರಣ್ಯ ಪ್ರದೇಶದಲ್ಲಿರುವ ಕಾಡು ಪ್ರಾಣಿಗಳನ್ನು ಸಂರಕ್ಷಣೆ ಮಾಡುವುದು ಮತ್ತು ತನ್ಮೂಲಕ ಜನರ ಕೃಷಿಗೆ ಆಗತಕ್ಕ ಹಾವಳಿಯನ್ನು ತಪ್ಪಿಸುವುದು ಈ ಎರಡೂ ಬಹಳ ಅಗತ್ಯವಾದವುಗಳು. ಮುಖ್ಯವಾಗಿ ಮಲೆನಾಡು ಪ್ರದೇಶದಲ್ಲಿ ವನ್ಯಜಂತುಗಳಿಂದ ಅಂದರೆ ಇವುಗಳ ಹಾವಳಿಯಿಂದ ಕೃಷಿಗಾರರಿಗೆ ಬಹಳ ಕಷ್ಟನಷ್ಟಗಳಾಗುತ್ತಿವೆ. ಈ ಕಷ್ಟ ದಕ್ಷಿಣ ಕನ್ನಡ ಜಿಲ್ಲೆ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಕಾಡು ಪ್ರದೇಶ ಜಾಸ್ತಿ ಇರುವುದರಿಂದ ಈ ಮೃಗಗಳ ಹಾವಳಿ ಜಾಸ್ತಿ ಇದೆ. ಆದಕಾರಣ ರೈತರಿಗೆ ಒಂದು ರಕ್ಷಣೆ ಕೊಡಬೇಕಾದ್ದು ಅಗತ್ಯ. ಆದರೆ ಈ ಕಾಡು ಪ್ರಾಣಿಗಳಲ್ಲಿ ಕೆಲವು ಜನರಿಗೆ ಆಹಾರವಾಗಿ ಉಪಯೋಗವಾಗತಕ್ಕ ಪ್ರಾಣಿಗಳೂ ಇರುತ್ತವೆ. ಆದುದರಿಂದ ಅವುಗಳ ಯೋಗ್ಯ ರೀತಿಯ ಬೆಳವಣಿಗೆಗೆ ಒಂದು ರಕ್ಷಣೆಯನ್ನು ಕೊಡಬೇಕಾದ್ದು ಆಗತ್ಯ. ಇದರಿಂದ ಜನಗಳಿಗೆ ಒಂದು ಹೆಚ್ಚಿನ ಪ್ರಯೋಜನ ಆಗುತ್ತದೆ. ಆದುದರಿಂದ ಈ ಪ್ರಾಣಿಗಳ ಸಂರಕ್ಷಣೆಗಾಗಿ ಒಂದೊಂದು ಮಾದರಿ ಫಾರಂ ಮಾಡಬೇಕೆಂದು ಹೇಳುತ್ತೇನೆ. ಮೇಲಾಗಿ ಇವುಗಳ ಸಂದರ್ಶನ ಜನರಿಗೊಂದು ವಿಶೇಷ ಸಂದರ್ಭವಾಗಿರುವುದರಿಂದ ಪ್ರತಿಯೊಂದು ಜಿಲ್ಲೆಯಲ್ಲಿಯೂ ಒಂದೊಂದು ಈ ಪ್ರಾಣಿಗಳನ್ನು ಸಾಕುವ ಕೇಂದ್ರಗಳನ್ನು ತೆರೆಯತಕ್ಕದ್ದು ಅಗತ್ಯವೆಂದು ಹೇಳುತ್ತೇನೆ. ಜನರೂ ಸಹಾ ಈ ಕಾಡು ಪ್ರಾಣಿಗಳ ಪರಿಚಯ ಹಾಗೂ ಅವುಗಳಿಂದಾಗತಕ್ಕ ಸಾಧಕ ಬಾಧಕಗಳನ್ನು ಅವರು ತಿಳಿದುಕೊಳ್ಳಬೇಕು. ದಕ್ಷಿಣ ಕನ್ನಡ ಜಿಲ್ಲೆಯ ಕೆಲವು ಭಾಗಗಳಲ್ಲಿ ಕಾಡು ಹಂದಿಯ ಕಾಟ ಪೈರುಗಳಿಗೆ ಬಹಳವಾಗಿರುತ್ತದೆ. ಇದರಿಂದ ರೈತನಿಗೆ ತುಂಬಾ ಕಷ್ಟನಷ್ಟಗಳಾಗುತ್ತಿದೆ. ಆದುದರಿಂದ ಇಂಥ ಪ್ರಾಣಿಗಳನ್ನು ನಾಶಮಾಡಿ ಅವರ ಬೆಳೆಗಳನ್ನು ರಕ್ಷಿಸತಕ್ಕದ್ದು ಅತ್ಯಗತ್ಯ. ಇಷ್ಟೇ ಅಲ್ಲದೆ ಕಾಡುಗಳಲ್ಲಿ ಬೆಳೆಗಳನ್ನು ನಾಶಪಡಿಸತಕ್ಕಂಥ ಕೆಲವು ಕ್ರಿಮಿಕೀಟಗಳಿರುತ್ತವೆ. ಇದನ್ನು ತಡೆಗಟ್ಟಲು ಪ್ರತ್ಯೇಕ ಪ್ರಯತ್ನಗಳನ್ನು ಮಾಡಬೇಕೆಂದು ಹೇಳುತ್ತೇನೆ. ಸರ್ಕಾರದವರು ಒಂದು ಕಡೆ ಈ ಪ್ರಾಣಿಗಳನ್ನು ರಕ್ಷಣೆ ಮಾಡತಕ್ಕ ಕಾರ್ಯದಲ್ಲಿ ತೊಡಗಿದರೆ, ಇನ್ನೊಂದು ಕಡೆ ಈ ಪೈರುಗಳಿಗೆ ಆಗತಕ್ಕ ಕಷ್ಟನಷ್ಟಗಳನ್ನು ತಪ್ಪಿಸಲು ಸರ್ಕಾರದವರು ಸೂಕ್ತ ಏರ್ಪಾಡುಗಳನ್ನು ಮಾಡಬೇಕಾದ್ದು ಅತ್ಯಗತ್ಯ ಎಂದು ಹೇಳುತ್ತೇನೆ. ಇದರ ಜೊತೆಗೆ ಮುಖ್ಯವಾಗಿ ಮಲೆನಾಡಿನಲ್ಲಿರತಕ್ಕ ರೈತರಿಗೆ ಧರ್ಮಾರ್ಥವಾಗಿ ಕೋವಿ ಲೈಸೆನ್ಸ್

(ಶ್ರೀ ಗೋಪಾಲ ಸಾಲೆನ್ನ)

ಗಳನ್ನು ಕೊಡಬೇಕೆಂದು ಹೇಳುತ್ತೇನೆ. ಈ ಕೋವಿಗಳನ್ನು ಅವರಿಗೆ ಮುಫತ್ತಾಗಿ ಕೊಡದೆ ಹೋದರೆ ಅವರು ತಮ್ಮ ಪಚ್ಚೆ ಪೈರುಗಳಿಗೆ ಆಗತಕ್ಕ ನಷ್ಟವನ್ನು ತಪ್ಪಿಸಿಕೊಳ್ಳಲು ಬಹಳ ಕಷ್ಟವಾಗುತ್ತದೆ. ಇಷ್ಟೇ ಅಲ್ಲದೆ ಅಲ್ಲಿ ಅಪಾಯಕಾರಿಯಾದ ಹಾವುಗಳು ಬೇರೆ ತುಂಬಾ ಇರುತ್ತವೆ. ಅವುಗಳ ಬಗ್ಗೆ ಆಗತಕ್ಕ ಕೆಡುಕನ್ನು ತಡೆಗಟ್ಟಲು ಮುಂಜಾಗ್ರತೆಯ ಕಾರ್ಯಕ್ರಮಗಳನ್ನು ಕೂಡಲೇ ಕೈಗೊಳ್ಳಬೇಕು. ಹೀಗೆ ಸರ್ಕಾರ ಒಂದು ಕಡೆ ಪ್ರಾಣಿಗಳ ಸಂರಕ್ಷಣೆಯನ್ನೂ ಇನ್ನೊಂದು ಕಡೆ ರೈತನ ಬೆಳೆಗೆ ಆಗತಕ್ಕ ಕಷ್ಟನಷ್ಟಗಳನ್ನು ತಪ್ಪಿಸಲು ಕೂಡಲೆ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕಾಗಿದೆ. ಅಂತೂ ಒಟ್ಟಿನಲ್ಲಿ ಕಾಡಿನಲ್ಲಿರತಕ್ಕ ಸುಂದರವಾದ ಪ್ರಾಣಿಗಳ ಹಾಗೂ ಉಪಯುಕ್ತವಾದ ಪ್ರಾಣಿಗಳ ಬೆಳವಣಿಗೆಯನ್ನು ಆದಷ್ಟೂ ನೂತನವಾದ ರೀತಿಯಲ್ಲಿ ಅವುಗಳ ಅಭಿವೃದ್ಧಿಯನ್ನೂ ಕೈಗೊಂಡು ಜನರಿಗೆ ಅನುಕೂಲವಾಗತಕ್ಕ ರೀತಿಯಲ್ಲಿ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ. ಮತ್ತು ದೊಡ್ಡ ದೊಡ್ಡ ಪಟ್ಟಣಗಳು ಜೂ ಮಂದಿರಗಳನ್ನು ತೆರೆದು ಜನತೆ ಅವುಗಳ ಉಪಯೋಗವನ್ನು ಹೊಂದುವಂತೆ ಏರ್ಪಾಡನ್ನು ಮಾಡಬೇಕೆಂದು ಹೇಳುತ್ತೇನೆ. ಒಟ್ಟಿನಲ್ಲಿ ಇದು ಒಂದು ಉಪಯುಕ್ತವಾದ ಮಸೂದೆ ಇದರಿಂದ ಜನರಿಗೆ ಆದಷ್ಟು ಸಹಾಯವಾಗುವಂತೆ ಕೆಲವು ಸೂಕ್ತ ಬದಲಾವಣೆಗಳನ್ನು ಮಾಡಿ ಯೋಗ್ಯ ರೀತಿಯಲ್ಲಿ ಇದನ್ನು ಜಾರಿಗೆ ತರಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ದಯಾನಂದ ಆರ್. ಕಳಲೆ (ಕಾರ್ಕಳ).—ಸ್ವಾಮಿ, ಈಗ ಸಭೆಯ ಮುಂದೆ ಇರತಕ್ಕ ಮೈಸೂರು ರಾಜ್ಯದ ವನ್ಯಮೃಗಗಳ ಹಾಗೂ ಪಕ್ಷಿಗಳ ಸಂರಕ್ಷಣೆಗೆ ಸಂಬಂಧಪಟ್ಟ ವಿಧೇಯಕವನ್ನು ಸ್ವಾಗತಿಸುತ್ತ ನಾನೀಗ ಕೆಲವೊಂದು ಸೂಚನೆಗಳನ್ನು ಕೊಡಬಯಸುತ್ತೇನೆ. ಇದರಲ್ಲಿ ಈಗ ಈ ವನ್ಯಮೃಗಗಳ ಸಂರಕ್ಷಣೆಗಾಗಿ ಒಂದು ಮಂಡಲಿಯನ್ನು ಮಾಡಬೇಕೆಂಬ ಸೂಚನೆ ಇದೆ. ಇಂಥ ಒಂದು ಸಮಿತಿಯನ್ನು ನಾವೀಗ ಏರ್ಪಡಿಸತಕ್ಕದ್ದು ಅನವಶ್ಯಕವಾಗಿರುತ್ತದೆಂದು ನನ್ನ ಭಾವನೆ. ಇಂಥ ಒಂದು ಸಮಿತಿಯಿಂದ ಈ ವನ್ಯ ಮೃಗಪಕ್ಷಿಗಳ ಸಂರಕ್ಷಣೆ ಕಾಲ ಕಾಲಕ್ಕೆ ಸರಿಯಾಗಿ ಆಗುವುದಿಲ್ಲ ಎಂಬುದು ನನ್ನ ಒಂದು ಸೂಚನೆ. ಇಂಥ ಒಂದು ಸಲಹಾ ಸಮಿತಿಗೆ ನಮ್ಮಂಥವರನ್ನು ಹಾಕದೆ ಯಾರಿಗೆ ಈ ವನ್ಯ ಮೃಗಗಳ ಸಂಪರ್ಕ ಜಾಸ್ತಿಯಾಗಿರುತ್ತದೆಯೋ ಅಂಥವರ ಮನಸ್ಸನ್ನು ನಾವು ಯಾವ ರೀತಿ ಪರಿವರ್ತನೆ ಮಾಡಬೇಕು ಎಂಬುದನ್ನು ಆಲೋಚಿಸುವುದು, ಅದಕ್ಕೆ ತಕ್ಕ ಪ್ರಯತ್ನಗಳನ್ನು ಮಾಡತಕ್ಕದ್ದು ಲೇಸಾಗಿರುತ್ತೆಂದು ನನ್ನ ಅಭಿಪ್ರಾಯ ಇನ್ನು ಇದಕ್ಕೋಸ್ಕರ ಒಂದು ಅಧಿಕಾರವರ್ಗವನ್ನು ಹೆಚ್ಚಿಗೆ ಮಾಡುವ ಒಂದು ಸಲಹೆ ಇದರಲ್ಲಿದೆ. ನಾವು ಬರೀ ವಿಧೇಯಕ ಅಥವಾ ಯಾವುದೇ ಒಂದು ತರಹದ ಕಾನೂನನ್ನು ಮಾಡುವುದರಿಂದಲೇ ಎಲ್ಲವನ್ನೂ ಕಾರ್ಯಗತ ಮಾಡಿಕೊಳ್ಳುವುದಕ್ಕೆ ಅಷ್ಟು ಸಾಧ್ಯವಾಗಲಾರದು. ನಾವು ವಿಧೇಯಕಗಳನ್ನೇನೋ ಮಾಡುತ್ತ ಹೋಗುತ್ತಿದ್ದೇವೆ. ಆದರೆ ಇದನ್ನು ಕಾರ್ಯಗತ ಮಾಡುವುದರಲ್ಲಿ ನಾವು ಅಷ್ಟು ಫಲಕಾರಿಯಾಗಿರುವುದಿಲ್ಲ. ಉದಾಹರಣೆಗೋಸ್ಕರ ಇಲ್ಲಿ ತಂದಿರುವ ವಿಧೇಯಕದಲ್ಲಿ ಮಾಡಿರುವಂತೆ ಗೇಂ ಸ್ಯಾಂಕ್ಚುಯರಿನ್ ಎನ್ನುವ ಪ್ರದೇಶಗಳನ್ನು ಪ್ರಾಯೋಗಿಕವಾದ ಕೇಂದ್ರಗಳನ್ನಾಗಿ ಅರಣ್ಯಗಳಲ್ಲಿ ಮಾಡಿ ಅರಣ್ಯ ಸಂಪತ್ತನ್ನು ವನ್ಯ ಮೃಗಗಳನ್ನೂ ರಕ್ಷಿಸುವುದಕ್ಕೋಸ್ಕರ ಇಂತಹ ಕಾನೂನುಗಳನ್ನು ಮಾಡಿರುತ್ತೇವೆ. ಮಾನ್ಯ ಪಾಟೀಲರವರು ಈ ಮೊದಲೇ ಹೇಳಿದಂತೆ ಇಂತಹ ಕಾನೂನುಗಳನ್ನು ಇದಕ್ಕಾಗಿ ನೇಮಿಸಿರತಕ್ಕ ಅಧಿಕಾರಿಗಳೇ ಮನಸೋ ಇಚ್ಛೆಯಾಗಿ ಮೃಗ ಪಕ್ಷಿಗಳ ಬೇಟೆ ಮಾಡಿ ಮುರಿಯುತ್ತಾರೆ. ಅಲ್ಲದೆ ಈ ಕಾನೂನನ್ನು ತರುವುದರಿಂದ ಹೆಚ್ಚಿನ ಕಷ್ಟವಾಗುತ್ತಿರುವುದು ಹಳ್ಳಿಯ ಜನಗಳಿಗೆ. ಇದನ್ನು ತಪ್ಪಿಸುವುದಕ್ಕೋಸ್ಕರ ಎಂದು ಇಲ್ಲಿ ಹೇಳಬಹುದಾದರೂ ಮೃಗಗಳ ವಿಹಾರದ ನೆಪದಿಂದ ಗೇಂಸ್ ಸ್ಯಾಂಕ್ಚುಯರಿಯಲ್ಲಿರುವ ಅಧಿಕಾರಿಗಳೇ ಶಾಮೀಲು ಆಗಿ ಮೃಗಗಳು ಹಾಳಾಗುತ್ತಿವೆ. ತಮ್ಮ ಬೆಳೆಗಳನ್ನು ಪೈರು ಬರುವಾಗ ಮೃಗಗಳಿಂದ ತೊಂದರೆಯಾಗುತ್ತದೆ ಎಂದು ಅದನ್ನು ನಾಶ ಮಾಡುವುದಕ್ಕೋಸ್ಕರ ಅವುಗಳನ್ನು ಕೊಲ್ಲಬೇಕಾದ ಸಂದರ್ಭಗಳೂ ಬರುತ್ತವೆ. ಇಂತಹ ಸಂದರ್ಭದಲ್ಲಿ ಈ ಕಾನೂನನ್ನು ತರುವುದರಿಂದ ರೈತರಿಗೆ ಕಷ್ಟವಾಗುತ್ತದೆ. ವನ್ಯ ಮೃಗಗಳು ತುಂಬಾ ನಾಶವಾಗುತ್ತಿವೆ; ಅವನ್ನು ರಕ್ಷಿಸುವುದಕ್ಕೋಸ್ಕರ ಈ ಕಾನೂನನ್ನು ತರಬೇಕಾದ ಸಂದರ್ಭ ಬಂದಿದೆ ಎನ್ನಬಹುದು. ರೈತರಿಗೆ ತಮ್ಮ ಬೆಳೆ ಬರುವುದು ವರ್ಷದ ಮೂರು ತಿಂಗಳಲ್ಲಿ, ಎಂದರೆ, ಅಕ್ಟೋಬರ್, ನವಂಬರು ಮತ್ತು ಡಿಸೆಂಬರು ತಿಂಗಳುಗಳಲ್ಲಿ. ಈ ಕಾಲದಲ್ಲಿ ರೈತರು ರಾತ್ರಿ ಹೊತ್ತು ಗುಡಿಸಲುಗಳನ್ನು ಹಾಕಿಕೊಂಡು ಕಾಯಬೇಕಾಗುತ್ತದೆ. ಇಂತಹ ಕಾಲದಲ್ಲಿ ಕ್ರೂರ ಮೃಗಗಳು ತೊಂದರೆ ಮಾಡಿದರೆ ಬೇಟೆಯಾಡಿ ತೊಂದರೆ ಮಾಡಲೇ ಬೇಕಾಗುತ್ತದೆ. ತಮ್ಮ ಬೆಳೆಗಳನ್ನು ರಕ್ಷಿಸುವ ದೃಷ್ಟಿಯಿಂದ ಊರುಗಳ ಮತ್ತು ಹಳ್ಳಿಗಳ ಹತ್ತಿರವಿರುವ ಅರಣ್ಯಗಳ ಮೃಗಗಳಿಂದ ತೊಂದರೆಯಾಗದಂತೆ ಬೇಟೆ

ಮಾಡಿ ಓಡಿಸಬೇಕಾಗುತ್ತದೆ. ಇದಕ್ಕೆ ತೊಂದರೆ ಬಾರದಂಥ ಸಲಹೆಯನ್ನೂ ಇದರಲ್ಲಿಡುವುದು ಸೂಕ್ತ ಎಂದು ತೋರುತ್ತದೆ. ಇಂತಹ ಉಪದ್ರವಗಳನ್ನು ತಪ್ಪಿಸಲೋಸುಗ ಈ ವಿಧೇಯಕದಲ್ಲಿ ಇದನ್ನೂ ಅಳವಡಿಸುವುದು ಉತ್ತಮ. ಇಲ್ಲದಿದ್ದರೆ ಹಳ್ಳಿಯವರಿಗೆ ತೊಂದರೆಯಾಗುತ್ತದೆ. ವಿಹಾರ ಮಾಡತಕ್ಕ ಜನರಿಗೆ ಇದರಿಂದ ತೊಂದರೆ ಬರುವುದಿಲ್ಲ. ಹಳ್ಳಿಯ ಜನರಿಗೆ ತೊಂದರೆಯಾಗುವ ವಿಷಯಗಳು ಇದರಲ್ಲಿವೆ.

ಎರಡನೇದು, ಮೃಗಳನ್ನು ಸಂರಕ್ಷಿಸುವುದಕ್ಕೆ ಇದರಲ್ಲಿ ಕೆಲವು ಉದ್ಯೋಗಗಳನ್ನು ಮಾಡಬೇಕೆಂದು ಇದರಲ್ಲಿದೆ. ಜೂವಲಾಜಿಕಲ್ ಗಾರ್ಡನ್ಸಿನ ತರಹದಲ್ಲಿ ಅರಣ್ಯ ಪ್ರದೇಶಗಳಲ್ಲೇ ಸುಮಾರು 200 ಅಥವಾ 300 ಎಕರೆಯಷ್ಟು ಪ್ರದೇಶವನ್ನು ಸೇರಿ ಅಲ್ಲೇ ನೈಸರ್ಗಿಕವಾಗಿ ಕಾಡು ಮೃಗಗಳನ್ನು ಅವುಗಳ ಮನಸೋಇಚ್ಛೆಯಾಗಿ ವಿಹರಿಸಲು ಮತ್ತು ಅವುಗಳ ಜೀವನವನ್ನು ನಡೆಸುವಂತೆ ಮಾಡುವುದು ಯುಕ್ತವಾಗಿರುತ್ತದೆ. ಈಗ ಜೂಗಳಲ್ಲಿ ನಾವು ನೋಡುತ್ತಿರುವ ಹಾಗೆ ವನ್ಯ ಮೃಗಗಳು ಕೃತಕವಾದ ಜೀವನವನ್ನು ಅನುಸರಿಸುತ್ತವೆ. ಅವುಗಳಿಗೆ ಹೆಚ್ಚಿನ ಸ್ವಾತಂತ್ರ್ಯ ವಿರುವುದಿಲ್ಲ. ಅದರಿಂದ ವನ್ಯಮೃಗಗಳು ಮತ್ತು ಪಕ್ಷಿಗಳ ರಕ್ಷಣೆಗಾಗಿ ಕೆಲವು ಕಡೆ ಇರುವ ಅರಣ್ಯ ಪ್ರದೇಶವನ್ನು ಸುಮಾರು 200-300 ಎಕರೆಗಳಷ್ಟು ಪ್ರದೇಶವನ್ನು ಮೀಸಲಾಗಿಟ್ಟು ಅವುಗಳು ನೈಸರ್ಗಿಕವಾದ ಒಂದು ಜೀವನವನ್ನು ಅನುಸರಿಸುವಂತೆ ಮಾಡುವುದೊಳ್ಳೆಯದು. ಇದಕ್ಕೆ ಕೇಂದ್ರದವರ ಸಹಾಯವು ಇದೆ. ಇತ್ತೀಚೆಗೆ ದೆಹಲಿಯಲ್ಲಿ ಮತ್ತು ಹೈದರಾಬಾದಿನಲ್ಲಿ ಜೂವಲಾಜಿಕಲ್ ಗಾರ್ಡನ್ಸ್ ಎಂದು ಪ್ರಾಯೋಗಿಕವಾಗಿ ಎಕ್ಸ್‌ಪೆರಿಮೆಂಟು ಮಾಡಬೇಕೆಂದು ಮಾಡಿದ್ದರೂ ಕೂಡ ಅವು ಅಷ್ಟು ಫಲಕಾರಿಯಾಗಿಲ್ಲ ಎಂದು ನಾನು ಕೇಳುತ್ತೇನೆ. ಅರಣ್ಯ ಸಂಪತ್ತು ನಮ್ಮ ಮೈಸೂರಿನಲ್ಲಿ ಬೇಕಾದಷ್ಟಿದೆ. ಇಲ್ಲಿ ಇಂತಹ ಕೇಂದ್ರವನ್ನು ಮಾಡಿದರೆ ಉತ್ತಮವಾದ ಫಲ ದೊರಕಬಹುದು ಎಂದು ನಾನು ಭಾವಿಸುತ್ತೇನೆ.

ಮತ್ತೆ, ಟ್ಯಾಕ್ಸಿಡರ್ಮಿಸ್ಟ್ಸ್ ಎಂದು ಕೆಲವು ಕಡೆ ಇದ್ದಾರೆ. ಇವರು ಮೃಗ ಪಕ್ಷಿಗಳು ಸತ್ತ ಮೇಲೆ ಅವುಗಳ ಅವಶೇಷವನ್ನುಳಿಸಿ ಅವುಗಳ ಚರ್ಮವನ್ನು ಹದ ಮಾಡಿ ವ್ಯಾಪಾರ ನಡೆಸುತ್ತಿದ್ದಾರೆ. ಆದರಲ್ಲಿ ಷಿಕಾರಿ ಮಾಡುವ ಜನರೇ ಹೆಚ್ಚಾಗಿರುತ್ತಾರೆ. ಇವರುಗಳು ಈ ವನ್ಯ ಮೃಗಗಳನ್ನು ರಕ್ಷಿಸುವುದಕ್ಕೆ ಬದಲಾಗಿ ಇವರುಗಳಿಂದಲೇ ಹೆಚ್ಚು ನಾಶವಾಗಿ ಇಂದು ವ್ಯಾಪಾರದ ದೃಷ್ಟಿಯಿಂದ ವ್ಯವಹಾರ ನಡೆಸುತ್ತಿದ್ದಾರೆ. ಅವರು ಮೃಗಗಳನ್ನು ಮಾರಾಟ ಮಾಡಿ ನೂರಾರು ಕೆಲವು ಕಡೆ, ಸಾವಿರಾರು ಚರ್ಮಗಳನ್ನು ಹದ ಮಾಡಿ ವ್ಯಾಪಾರ ನಡೆಸಲು ಅವರಿಗೆಲ್ಲಿಂದ ಇಷ್ಟು ಚರ್ಮಗಳು ಬರುತ್ತಿವೆ ಎನ್ನುವುದನ್ನು ಅರಣ್ಯದ ಅಧಿಕಾರಿಗಳು ತಿಳಿಸಬೇಕಾಗಿದೆ. ವನ್ಯ ಮೃಗಗಳ ಮತ್ತು ಪಕ್ಷಿಗಳ ಸಂಪತ್ತು ಮೈಸೂರಿನಲ್ಲಿ ಬೇಕಾದಷ್ಟು ಇತ್ತು ಎಂದು ನಾವು ಕೇಳಿದ್ದೇವೆ. ಹಿಂದೆ ಲಕ್ಕವಳ್ಳಿ ಕಾಡಿನಲ್ಲಿ ಸಿಂಹಗಳಿದ್ದುವು ಎಂದು ಕೇಳಿದ್ದೇವೆ. ಇವುಗಳನ್ನೆಲ್ಲಾ ಸಂರಕ್ಷಿಸುವ ಉದ್ದೇಶದಿಂದ ಎಲ್ಲಾ ಜನರನ್ನೂ ಸೇರಿಸಿ ಬರೀ ಕಾಯದೆ ಮಾಡುವುದಕ್ಕಿಂತ ವನ್ಯ ಮೃಗಗಳ ರಕ್ಷಣೆಗೆ ಹೆಚ್ಚಿನ ಅಧಿಕಾರವನ್ನು ಅಧಿಕಾರಿಗಳಿಗೆ ಕೊಡದೇ ಅವುಗಳನ್ನು ಉಳಿಸುವುದರ ಕಡೆಗೆ ಲ ಕೊಡಬೇಕೆಂದು ಹೇಳಿ ನನ್ನ ಈ ಎರಡು ಮಾತುಗಳನ್ನು ಮುಗಿಸುತ್ತೇನೆ.

† **Sri M. Y. GHORPADE** (Sandur).—This legislation for protection of wild life, as far as I can see, is mainly a codification of laws existing in five different areas. My submission is that this Act may not be quite sufficient to deal with the new threat to wild life that has arisen as a result of encroachment of civlization on the privacy of the forest. This Act would have been sufficient some 20 years ago when there was plenty of forests, plenty of uncultivated waste, the pressure of population also was not heavy and so inspite of killing there was little danger of extermination of wild animals. As everybody knows now as a result of urbanisation, the noise created by disturbance of civilization like jeeps and factories it has become a special problem as to how to protect the wild life from extinction. It is no exaggeration to say that as a result of this inevitable disturbance of civilisation, the balance of nature in the forest is being seriously threatened and therefore as some speakers on the other side pointed out, we have the very distressing phenomena of commercialised killing. In the old days some wild animals or birds

(SRI M. Y. GHORPADE)

would be killed for food or for sport but now we have the phenomenon of commercialised killing for sale and game. As Sri V. S. Patil rightly pointed out milling animals by jeeps and lights in large numbers for purpose of sale in markets is a threat. That is a new threat and I do not know to what extent this Bill will be effective in preventing all that. After all, the Bill does not say anything new. It says that the Forest Guard should fine a man who trespasses or violates the Forest Act but we know that has not been sufficient especially as a result of commercialisation of killing. The man who kills is liable to pay Rs. 100 or 200 as fine and thereby the scope for corruption becomes tremendous and in practice often it becomes administratively impossible for the forest guard to check violation of the Act. Therefore I would suggest that the Mysore Government should attempt a major experiment, namely, of associating not only the Forest Department authorities but also the revenue authorities and mainly the village panchayat, in protecting wild animals.

2-00 P.M.

I feel, Sir, that if the Village Panchayats are told that they would get the income of license fee and they are the guardians of these wild animals it might be more effective than leaving it merely to forest guards. It is an experiment and it is bold experiment a worth trying. I am personally convinced, that mere Act will not serve the purpose of protecting these wild animals. That is one suggestion, which I request the Government to seriously consider. The Government have rightly thought of Sanctuaries and reserve forests and non-cultivable waste. But I feel, that apart from the Sanctuaries and the protection given to the wild animals, sufficient steps should be taken to see that protection is given to animals not only in reserve forests, but also in this uncultivated waste. I might mention, Sir, a small point. The other day I had an occasion to see the Sanctuary near Srirangapatna in Rangatitlu. It is a very beautiful Sanctuary and I am glad to say that the Hon'ble Minister has taken a lot of interest and has intention of improving it. But, I have one thing to say, which I hope he will not misunderstand it by my saying. In order to get two Crores of rupees there was necessity to increase the spectators. This would endanger the privacy of these birds. There was one suggestion the Hon'ble Minister has made in the Book—"why not have Bee-keeping on the island in Rangatitlu ?". I personally feel that that might cause considerable disturbance to the birds. Therefore, it would not be proper to keep any Bee-keeping unit or apparatus on the small island where birds are bred, because that would certainly cause considerable disturbance to the peace and privacy of that island. That is only a suggestion, and I hope the Hon'ble Minister will give it favourable consideration.

Then there is one other point in section 59. I am not able to understand the purpose of section 59, where the Government says "that the

State Government may, by notification, exempt any class of persons from all or any of the provisions of this Act, subject to such terms and conditions as the State Government may specify in such notification". I do not really understand the purpose of such exemptions, because as we all know such exemptions have a tendency to create a loophole in the Act, which is bigger than the Act itself. I would like to conclude by saying that it is my feeling that whether it is wild life or any other life in this country custom is still more powerful than law. Therefore, our basic problem is how to replace this custom by a more effective law. I should like to give an incident to prove as to how custom is more powerful than law. In Schedule I under Vermin, monkeys have been classified as Vermin. That means anybody is free to kill all monkeys, because it has been classified as a Vermin. I am not quite sure that it is a good thing. In spite of that, because of traditional feelings, people do not kill monkeys. In spite of a good law, they won't take to it. On the other hand, Brahamini Kite has been included in Schedule V under protected wild animals and birds. In Mysore area, the sentiment for the Brahmini Kite is so strong that I am sure, even if there was no law, nobody would kill it. I am saying this to show how custom is stronger than law. Our problem is how to replace custom by effective law. We all know that in the days of Kalidasa, there were Sanctuaries for protection of wild animals in Gurukulas. Nobody used to shoot them. We get a beautiful situation in Kalidasa, where King Dushyanta is hunting. There, on the trees he hears some parrots chanting mantras. Immediately the king realises that it must be a Sanctuary and immediately he withdraws his arrow. To-day, we are not able to replace them with effective law. To-day, those customs are disintegrating. I submit, with this law in the changed situation, the wild animals are not threatened by extermination by the disturbance of civilization. I personally feel that the Act will not serve the purpose. It would have been fairly adequate some twenty years ago. You will have to make a revolutionary attempt to protect the wild animals by associating the urban people and by making them feel that they are morally and in every other respect responsible to co-operate with the forest and revenue authorities. That can simply be done by introducing a provision whereby the license fee and fines levied will go to the panchayat and the panchayat will be responsible to see that there is no violation of this wild life Act. I want to repeat that the forest guards are not in a position to do it. I realise that this is a bold experiment, but I hope the House will appreciate that it is worth trying because the other practices have not succeeded.

(Sri B. P. Kadam rose.)

Mr. SPEAKER.—I have got the list of 10 more Members left over, who are desirous of praticipating. I will extend the time by one hour. I am trying to give scope to the fullest extent possible to the Debate. Beyond one hour, I cannot do it myself. Let the Debate be cohesive and to the point.

Sri B. P. KADAM (Karwar).—The Bill being mainly on the lines of a similar provision enacted long back by the Government of Bombay, deserves considerable support. But, at the same time, great care must be taken to see that human life, cattle wealth as well as crop is protected. The admiration for all these wild animals is not new. It is not new since the advent of freedom. It was there in this country with the advent of civilization itself. The Spotted Deer, the Sambhar, the Tiger, the Peacock, the Wild Duck in the lake have been the subject of praise and inspiration of great poets in this country. As someone suggested it is the pangs of a bird which was the source of an epic and all that. At the same time, when everybody is anxious to see that wild animals are not indiscriminately crushed or rendered extinct, every care must be taken to see that human life is made as secure as it should be, and that can be done by giving due protection to the cattle wealth as well as the crop.

Coming, as I do from a forest area in North-Karnatak District, where once agriculture flourished, I must compare the figures relating to land under cultivation. In the year 1781, the land under cultivation was over 60 per cent. Even when the British made their mark in 1798, the land under cultivation was about 40 per cent or even more. And now, the land under cultivation is hardly 15 per cent. The minute we all come out of our Courtyard, we have to enter into the forest and we have to hold our life against wild animals in the forest and struggle against wild beasts, and in many cases shout against the Government helplessly in sheer pity. I would like to press two or three things and not go into details. Even in the British regime, protection was given to drive out wild animals during the monsoon months. During these months the wild animals and wild birds were so harmful that they deserved to be beaten out. Similarly, the wild tigers, the Cattle lifters and the wild pig are a great source of menace to the domestic cattle and crop as well.

Sri M. Y. GHORPADE.—The wild bore is classified as Vermin.

Sri B. P. KADAM.—Still some protection is given to it. There should be a clear provision for it. If you so desire, encouragement should be given to kill it at every stage. There should be no protection at any stage even in the reserved forest, Sir, in the North Kanara area...

Sri D. DEVARAJ URS (Minister for Labour, Housing and Transport).—If all become non-vegetarian...

Sri B. P. KADAM.—Sir, in the North Kanara District each year, the cattle killed is to the tune of about 2,000. In 1954, I asked a question before the Bombay Assembly about statistics of killing each year and it was said, it was of the order of 2,000. In one or two taluks alone, it comes to 150-200 each year and that being the case, many agriculturists are almost rendered helpless because the poor agriculturist cannot find any other alternative to get Compensation or takavi or any other financial help, if their cattle are lost. The *per capita* holding in Karwar and other coastal areas is very meagre. It is about 12 guntas. That being the case, every protection should be given to the agriculturist, his standing crop and also to his cattle. Here great pity is shown for tigers. Sir, care must be taken to see that tigers do not approach anywhere within two miles belt of the cultivated fields where cattle are taken for grazing purposes. If the Government would do some sort of a magic or some other feat, it would be very welcome. Or if the tigers by voluntary action restrict themselves within the bounds, we have no objection; we will be as non-violent to them as they will be to us. But if they tresspass into fields and desire to lift the cattle, then of course, the human population must be saved.

Sri D. DEVARAJ URS.—What is the method of preventing them from coming?

Sri B. P. KADAM.—It is for the Hon'ble Minister to imagine. Does it require further clarification?

Sir, that being the position, undue protection for the tigers who want to lift away cattle would be extremely harsh to the agriculturist. It so happens that many a time, the tigers are seen dragging cattle and it is not possible to kill them on the spot, because they cross into the wild forests, whereas the provision here is that they may be shot if they are on the field. Provision should be there in the Act to the affect that agriculturists can take action to shoot tigers if they are seen lifting cattle or even making an attempt in that direction. Otherwise, agriculturists have to go to the district office and go on applying for licence and after so many querries and so much fees, it is bound to be denied. Even if an agriculturist secures licence after five months, the tigers will not oblige the agriculturist by remaining on the spot waiting for the hunter to appear with a licence in his pocket and a weapon in his hand. These are the practical difficulties. Sometime, it so happens that tigers are roaming about even within the municipal limits of Karwar City. And people are helpless neither to drive tham out or to beat them. Even some person may put an anonymous petition that somebody is shooting the tigers which have come within the municipal limits of Karwar. In such cases human life itself is in danger. There must be provision to drive them away. Recently it so happened that one panther fell in a well within the municipal limits of Karwar itself and the women folk who went to the well in the morning to fetch water were simply horrified to see it. An enthusiastic young man shot the panther because the panther was trying to jump out of the well. Immediately some enquiry was started and there was the usual panchanama. Subsequently the Deputy Commissioner understood the situation and said that the matter may be allowed to rest. One has to take into consideration. What should be done under such circumstances? Then one Sarvodaya blessed man suggested that we should be non-violent to wild animals and even to monkeys. What is the way suggested to destroy the monkeys? He said, we must have a cave, and monkeys must be trapped and sent into this cave and fire must be set on the mouth of the cave, so that the smoke may enter the cave and the monkeys may be killed non-violently! Practically the wild animals have been living upon crops and cattle wealth. Even if we are to be

(SRI B. P. KADAM)

sympathetic to them, we must be reasonable and bear in mind the facts and figures. It should not be annihilation of mankind, especially in the forest-ridden district of North Kanara. Therefore I suggest that the following three must be allowed to be shot—wild pig, jackal and wild dog. Wild dogs must be shot wherever they are seen, whether it is a field, State forest or reserve forest. There should be no mercy. A forest officer of Bombay State Sri Singh said that the person who kills a wild dog or a wild (pig) must be rewarded.

Wild dog annihilates wild animals, spotted deer, sombre, panther and tiger. Wild dog is the greatest menace to wild animals and not man. Man has not killed as much wild animals as a wild dog has. It pursues somber, deer and indiscriminately kills them and renders them extinct. In Dandeli there are these animals in hundreds. As I said, the wild dog must be killed first and even the person who kills must be rewarded. However much you kill them, you cannot render it extinct, and we need not shed too much pity on these wild dogs.

Then comes the wild boar. Wild pig, being extremely prolific it can never be rendered extinct even if it is treated as vermin; it should be possible to kill them wherever it is traced. Any amount of indiscriminate killing of wild boar, will not render them extinct. Dr. Shirname who was for some time the Director of Agriculture in the Bombay State—once I discussed with him and he also said that any amount of killing of this wild boar will not render it extinct. He actually said that military operations like the pincer movement taken against these wild boars will not render them extinct. Let this Government have no sympathy towards wild boar. Let it be killed wherever it is sighted, on the field, minor forest, or reserve forests.

Then Sir, the other species are there. Without going into details at this stage, I would suggest that ample provisions should be made in this Bill for driving away wherever wild animals are sighted including tiger, during the monsoon season from the fields up to a distance of about 2–3 miles.

Then there should be scope for killing the wild board, etc. Further, there are restrictions that the owner of the field alone should kill. This is very absurd. For the protection of the crop, any person in the village must have ample opportunity to kill, he must be appreciated if he kills or drives away wild animals which are destroying the crops, specially in a forest ridden area in North Kanara District.

ಶ್ರೀಮತಿ ಬಿ. ಎಲ್. ಸುಬ್ಬಮ್ಮ (ಚಿಕ್ಕಮಗಳೂರು).—ಸ್ವಾಮಿ, ವನ್ಯ, ಮೃಗ, ಪಕ್ಷಿಗಳ ರಕ್ಷಣೆಗೆ ಸಂಬಂಧಪಟ್ಟ ಈ ಮಸೂದೆ ಮಾನ್ಯ ಅರಣ್ಯ ಶಾಖೆ ಸಚಿವರು ಸಭೆಯ ಮುಂದೆ ಇಟ್ಟಿದ್ದಾರೆ. ಇದನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ. ಮಲೆನಾಡಿನಲ್ಲಿ ಕಾಡು ಹೆಚ್ಚಾಗಿದೆ. ಎತ್ತರವಾಗಿಯೂ ದಟ್ಟವಾಗಿಯೂ ಬೆಳೆದಂಥ ವೃಕ್ಷಗಳಿರುವ ಪ್ರದೇಶಕ್ಕೆ ಕಾಡು ಎಂದು ಅನ್ನುತ್ತಾರೆ. ಕಾಡಿನಲ್ಲಿ ಕಾಡು ಕೋಣಗಳು, ಆನೆಗಳು ಅನೇಕ ತರಹದ ವನ್ಯ ಮೃಗಗಳು ಇರುತ್ತವೆ. ಅಶೋಕ ಚಕ್ರವರ್ತಿಯ ಕಾಲದಲ್ಲಿ ಶಿಕಾರಿ ನಿಷೇಧವಿತ್ತು. ಪಾಕ ಶಾಲೆಗೆ ಇಷ್ಟೇ ಪ್ರಾಣಿಗಳನ್ನು ಕೊಲ್ಲಬೇಕೆಂದು ಗರ್ಭ ಕಾಲದಲ್ಲಿ ಮೀನು, ಪಕ್ಷಿ, ಪ್ರಾಣಿಗಳನ್ನು ಕೊಲ್ಲುವುದು ನಿಷೇದವಿತ್ತು. ಕಾಡು ಹೇಗೆ ಇರುತ್ತದೆ ಎಂಬುದಕ್ಕೆ ವರ್ಣನೆಯು ಮಹಾ ಕವಿ ಭಾರ್ಗವಿ ರಚಿಸಿರುವ ಸಂಸ್ಕೃತ ಕಾವ್ಯ ಕಿರಾತಾರ್ಜುನ

ದಿಂದ ತಿಳಿದುಕೊಳ್ಳಬಹುದು. ಅಂಥ ಕಾಡು ಇಂದು ನೋಡುವುದಕ್ಕೆ ಸಾಧ್ಯವಿಲ್ಲ. ಕಾಡು ರಕ್ಷಣೆ ಮಾಡಬೇಕು ವನ್ಯ ಮೃಗಗಳ ರಕ್ಷಣೆ ಮಾಡಬೇಕು ಎಂಬ ಉದ್ದೇಶದಿಂದ ಈ ಮಸೂದೆ ಸಭೆಯ ಮುಂದೆ ತಂದಿದ್ದಾರೆ. ನಾವು ಇದಕ್ಕೆ ಪೂರ್ಣ ಬೆಂಬಲ ಕೊಡತಕ್ಕದ್ದು ಅತ್ಯಗತ್ಯ. ಇದುವರೆಗೆ ನಾವು ಕಾಡು ಪ್ರಾಣಿಗಳಿಗೆ ಆಶ್ರಯ ಕೊಡುತ್ತಾ ಬಂದಿದ್ದೇವೆ. ಇತ್ತೀಚೆಗೆ ಅರಣ್ಯ ನಾಶವಾದ ಹಾಗೆ ಕಾಡು ಪ್ರಾಣಿಗಳ ನಾಶ ಸಹ ಆಗಿದೆ. ಲಕ್ಕವಳ್ಳಿ ಜಲಾಶಯ ನಿರ್ಮಾಣ ಮಾಡುವಾಗ್ಗೆ ವಿಸ್ತಾರವಾದ ಕಾಡು ನಾಶ ಮಾಡಲಾಯಿತು. ಎಷ್ಟೋ ಕಾಡು ಪ್ರಾಣಿಗಳು ಅಲ್ಲಿಂದ ಬೇರೆ ಪ್ರದೇಶಕ್ಕೆ ಹೊರಟು ಹೋದುವು. ಅನೇಕ ಪ್ರಾಣಿಗಳು ಸತ್ತು ಹೋದುವು. ಕೆಲವು ಜನರು ಕಾಡು ಮೃಗಗಳನ್ನು ಹಿಡಿಯುವುದಕ್ಕೂ ಬೇಟೆಯಾಡಿ ಕೊಲ್ಲುವುದಕ್ಕೂ ಆನಂದ ಪಡುತ್ತಾರೆ. ಇದು ಎಂಥ ಆನಂದ ಅರ್ಥವಾಗುವುದಿಲ್ಲ. ಇವುಗಳನ್ನು ಕೊಲ್ಲುವುದು ನಿಲ್ಲಿಸಬೇಕು. ಹೆಣ್ಣು ಆನೆಗಳನ್ನು ಹೆಣ್ಣು ಜೀವಿಗಳನ್ನು ಕೊಲ್ಲಬಾರದು ಎಂದು ಈ ಕಾನೂನಿನಲ್ಲಿ ಇದೆ. ಅದರಂತೆ ಗಂಡು ಹುಲಿ ಸಹ ಬಹಳ ಪ್ರಾಮುಖ್ಯವಾದುದು. ಒಬ್ಬ ಬೇಡನು ಕ್ರೌಂಚ ಪಕ್ಷಿಯ ಜೋಡಿಯಲ್ಲಿ ಒಂದನ್ನು ಕೊಂದದ್ದರಿಂದ ಆ ದೃಶ್ಯ ವಾಲ್ಮೀಕಿ ಮಹರ್ಷಿಯ ಮನಸ್ಸಿನ ಮೇಲೆ ಪರಿಣಾಮವಾಗಿ ರಾಮಾಯಣ ಹುಟ್ಟಿದೆ. ಹಳ್ಳಿಗಳಲ್ಲಿ ರೈತನು ವ್ಯವಸಾಯ ಮಾಡಿ ಬೆಳೆದ ಫಸಲನ್ನು ರಾತ್ರಿ ವೇಳೆಯಲ್ಲಿ ಕಾಡುಹಂದಿ ಮುಂತಾದ ಅನೇಕ ಕಾಡು ಮೃಗಗಳು ಬಂದು ನಾಶ ಮಾಡುತ್ತವೆ. ಇದರಿಂದ ರೈತರಿಗೆ ಬಹಳ ತೊಂದರೆಯಾಗುತ್ತಿದೆ. ಮೃಗಯಾ ವಿಹಾರಕ್ಕಾಗಿ ಕೊಲ್ಲುವ ಅವಕಾಶ ಇರಕೂಡದು. ಆದರೆ ರೈತರಿಗೆ ತೊಂದರೆಯಾದರೆ ಅವನು ಅವುಗಳನ್ನು ಕೊಲ್ಲುವುದಕ್ಕೆ ಒಂದು ಅವಕಾಶವಿರಬೇಕು. ಅರಣ್ಯದಲ್ಲಿ ಅನೇಕ ದೊಡ್ಡ ದೊಡ್ಡ ಕಾಡುಕೋಣಗಳು ಇರುತ್ತವೆ. ಅವುಗಳನ್ನು ಅನ್ಯಾಯವಾಗಿ ಹಾಳು ಮಾಡಬಾರದು. ನಮ್ಮ ರಾಷ್ಟ್ರದಲ್ಲಿ ಇಂದು ನವಿಲು ರಾಷ್ಟ್ರೀಯ ಪಕ್ಷಿ ಎಂದು ಗೊತ್ತುಮಾಡಲಾಗಿದೆ. ನವಿಲು ಬಹಳ ಸುಂದರವಾದ ಪಕ್ಷಿ. ಕೆಲವು ಬೇಟೆಗಾರರು ಗಂಡು ನವಿಲು ಮಾಂಸ ಮಾರಿ ಜೀವನ ಮಾಡುವವರು ಇದ್ದಾರೆ. ಕೆಲವರು ಇಂಥ ಪ್ರಾಣಿಗಳನ್ನು ಹಿಡಿದು ಊರು ಊರಿಗೆ ಹೋಗಿ ಜೀವಂತವಾಗಿ ಇರುವ ಪ್ರಾಣಿಗಳನ್ನು ಮಾರುತ್ತಾರೆ. ಇದನ್ನು ತಡೆಯುವುದಕ್ಕೆ ಅವಕಾಶ ಮಾಡಿದ್ದಾರೆಂದು ನಾನು ನಂಬಿದ್ದೇನೆ. ಕಾಡಿನಲ್ಲಿ ಇಂತಕ್ಕಂಥ ಪಶು ಪಕ್ಷಿಗಳ ಏಳಿಗೆಯಾಗಬೇಕು. ಯಾಕೆಂದರೆ ನಮ್ಮ ಭಾರತದಲ್ಲಿ ಇವುಗಳಿಗೆ ಹೆಚ್ಚಿನ ಪ್ರಾಶಸ್ತ್ಯ ಕೊಡುತ್ತ ಬಂದಿದ್ದೇವೆ. ರಾಜಮಹಾರಾಜರು ಕೂಡ ಹೆಚ್ಚಿನ ಪ್ರಾಶಸ್ತ್ಯ ಕೊಟ್ಟಿದ್ದಾರೆ. ಆದುದರಿಂದ ಅವುಗಳನ್ನು ಉಳಿಸಿಕೊಂಡು ದೇಶದ ಸಂಪತ್ತನ್ನು ಬೆಳೆಸಿಕೊಂಡು ಬರುವುದು ನಮ್ಮ ಧರ್ಮವಾಗಿದೆ. ಈ ಮಸೂದೆಯನ್ನು ನಾನು ಸಂಪೂರ್ಣವಾಗಿ ಸ್ವಾಗತಿಸುತ್ತೇನೆ. ನನಗೆ ಮಾತನಾಡಲು ಎರಡು ನಿಮಿಷ ಅವಕಾಶ ಕೊಟ್ಟಿರುವ ಅಧ್ಯಕ್ಷರನ್ನು ವಂದಿಸುತ್ತೇನೆ.

ಶ್ರೀ ಜಿ. ರಾಮೇಗೌಡ (ದೊಡ್ಡಬಳ್ಳಾಪುರ).—ಮಾನ್ಯ ಅಧ್ಯಕ್ಷರೇ, ಈ ವಿಧೇಯಕವನ್ನು ಸ್ವಾಗತಿಸುತ್ತಾ ಒಂದೆರಡು ಸಲಹೆ ಕೊಡಲು ಇಚ್ಛೆಪಡುತ್ತೇನೆ. ಪ್ರಕೃತಿಯಿಂದ ದೈವದತ್ತವಾಗಿ ಕೊಟ್ಟಿರುವ ಕಾಡು ಪ್ರಾಣಿಗಳು ಅರಣ್ಯದಲ್ಲಿ ಇರಬೇಕು ಎಂಬ ಉದ್ದೇಶದಿಂದ ಈ ಮಸೂದೆಯನ್ನು ಅರಣ್ಯ ಶಾಖೆ ಮಂತ್ರಿಗಳು ತಂದಿದ್ದಾರೆಂದು ನಾನು ತಿಳಿದು ಕೊಂಡಿದ್ದೇನೆ. ವನ್ಯ ಪಶು ಪಕ್ಷಿಗಳಿಗೆ ತೊಂದರೆ ಮಾಡಬಾರದು, ಸಾಯಿಸ ಬಾರದು ಎಂಬ ಉದ್ದೇಶ ಮುಖ್ಯವಾಗಿ ಇದರಲ್ಲಿ ಇದೆ. ಕತ್ತಿ, ಬಂದೂಕು ಹಿಡಿದುಕೊಂಡು ಕಾಡಿನಲ್ಲಿ ಹೋಗಬಾರದು ಎಂದು ಹೇಳಿವೆ. ಆದರೆ ರೈತನಿಗೆ ಶಿಕಾರಿ ಮಾಡಲು ಅವಕಾಶ ಇರಬೇಕು. ಪ್ರೈವೇಟ್ ಲ್ಯಾಂಡ್ಸ್‌ಗಳಿಗೆ ಇದು ಅಪ್ಲೈ ಆಗಬಾರದು. ಯಾಕಂದರೆ ರೈತ ಜನರಿಗೆ ತೊಂದರೆಯಾಗುತ್ತದೆ. ಇದರಲ್ಲಿ ಅನೇಕ ಅಧಿಕಾರಿಗಳನ್ನು ಸೇರಿಸಿದ್ದೀರಿ. ಇದು ಅರ್ಥವಾಗುವುದಿಲ್ಲ. ಮುಖ್ಯ ಮಂತ್ರಿಗಳು ಈ ಮಂಡಲಿಯಲ್ಲಿ ಇರುವುದು ಮತ್ತು ಇದಲ್ಲದೆ ಈ ಸಮಿತಿಯಲ್ಲಿ ಡೈರೆಕ್ಟರ್ ಆಫ್ ಅಗ್ರಿಕಲ್ಚರ್ ಅವರನ್ನು ಇಟ್ಟುಕೊಳ್ಳುವುದು ಅನಾವಶ್ಯಕ ಎಂದು ನಾನು ಅಭಿಪ್ರಾಯಪಡುತ್ತೇನೆ. ಎಲ್ಲ ಅಧಿಕಾರಿಗಳನ್ನು ಸೇರಿಸದೆ ಒಂದು ಚಿಕ್ಕ ಸಮಿತಿ ಇರಬೇಕು. ಇದರಲ್ಲಿ ಅನೇಕ ಅಧಿಕಾರಿಗಳನ್ನು ಸೇರಿಸಿರುವುದು ಸರಿಯಲ್ಲ. ಇದು ಅನಾವಶ್ಯಕ ಎಂದು ನಾನು ಅಭಿಪ್ರಾಯ ಪಡುತ್ತೇನೆ.

ಇನ್ನು ರಿಜಿಸ್ಟ್ರೇಶನ್ ಆಫ್ ಸರ್ಟನ್ ಪರ್ಸನ್ಸ್ ಇನ್ ಪೊಜೆಶನ್ ಆಫ್ ಆರ್ಮ್ಸ್ ಎಂದು ಇರುವುದು ಖಂಡಿತವಾಗಿ ನನಗೆ ಅರ್ಥವಾಗುವುದಿಲ್ಲ. ದೇಶದಲ್ಲಿ ನಾನಾ ಕಾರಣಕ್ಕಾಗಿ ಬಂದೂಕದ ಲೈಸನ್ಸ್ ಇಟ್ಟುಕೊಂಡಿರುತ್ತಾರೆ. ಅಂಥವರು ಅರ್ಜಿ ಹಾಕಿ ಫೀಜ್ ಕೊಟ್ಟು ರಿಜಿಸ್ಟ್ರೇಷನ್ ಮಾಡಬೇಕಾದ ಪದ್ಧತಿ ಇರಕೂಡದು ಎಂದು ನಾನು ಹೇಳುತ್ತೇನೆ.

ಯಾರಿಗೆ ಷಿಕಾರಿ ಮಾಡಬೇಕೆಂದು ಮನಸ್ಸು, ಆಶೆ ಇದೆಯೋ ಅಂತಹವರು ಮಾತ್ರ ರಿಜಿಸ್ಟರ್ ಮಾಡಿಸಿಕೊಳ್ಳಬೇಕೇ ಹೊರತು ಮಿಕ್ಕ ಮನುಷ್ಯರು ಯಾರೇ ಆಗಲಿ ರೈತರು ಆಗಲಿ, ಅಧಿಕಾರಿ

(ಶ್ರೀ ಜಿ. ರಾಮೇಗೌಡ)

ಗಳಾಗಲಿ ಮತ್ತೆ ಯಾರೇ ಆಗಲಿ ಬಂದೂಕು ಹಿಡಿದ ಮಾತ್ರಕ್ಕೆ ಫೀಜು ಕೊಡಬೇಕೆಂದು ಹೇಳುವುದು ಸರಿಯಲ್ಲ ಅದಕ್ಕೆ ವಿನಾಯಿತಿ ಕೊಡಬೇಕೆಂದು ಸಲಹೆ ಮಾಡುತ್ತೇನೆ.

2-30 P.M.

ಚಾಪ್ಟರ್ 3 (14) ರ ಪ್ರಕಾರ ಮುನಿಸಿಪಲ್ ಏರಿಯಾದಲ್ಲಿ ಮಾತ್ರ ಕಾಡು ಮೃಗ ಗಲಾಟೆ ಮಾಡಿದಗೆ ಅದನ್ನು ಕೊಲ್ಲಬಹುದು ಎಂಬ ಅರ್ಥ ಬರುತ್ತದೆ. ಪಂಚಾಯ್ತಿ ಏರಿಯಾನೂ ಅದಕ್ಕೆ ಸೇರುತ್ತದೆಯೋ ಎಂಬುದು ಸ್ಪಷ್ಟವಾಗುವುದಿಲ್ಲ. ದುಷ್ಟ ಆನೆಯನ್ನು ಕೊಲ್ಲಬೇಕಾದರೆ 56 ನೇ ಸೆಕ್ಷನ್‌ನಲ್ಲಿ ಒಂದು ಪ್ರಾವಿಜನ್ ಇಟ್ಟಿದ್ದೀರಿ. ಹಾಗಿರುವಾಗ ಕೊಲ್ಲಕೂಡದು ಎಂಬ ಪ್ರೊವಿಷನ್ ಅನಾವಶ್ಯಕ, ಇವೆರಡೂ ಇದ್ದರೆ ಅರ್ಥ ಸರಿಯಾಗುವುದಿಲ್ಲ. ಆದ್ದರಿಂದ 56 ನೇ ಸೆಕ್ಷನ್ನನ್ನು ಉಳಿಸಿಕೊಂಡು 36 ನೇ ಸೆಕ್ಷನ್ನನ್ನು ತೆಗೆಯುಬೇಕೆಂದು ಸಲಹೆ ಮಾಡುತ್ತೇನೆ.

ಚಾಪ್ಟರ್ 7 (44) ರ ಪ್ರಕಾರ ಅಧಿಕಾರಿಗಳಿಗೆ ಕೆಲವು ಅಧಿಕಾರಗಳನ್ನು ಕೊಟ್ಟಿದ್ದೀರಿ. ಆ ಅಧಿಕಾರಿ ಯಾರ ಮನೆಗಾದರೂ ಬರಬಹುದು ಯಾರ ಜೋಬಿನಲ್ಲಾದರೂ ಕೈ ಹಾಕಬಹುದು ಎಲ್ಲಿ ಬೇಕಾದರೂ ತಡಕಬಹುದು ಎಂದು ಹೇಳಿದ್ದೀರಿ. ಪ್ರಜಾಪ್ರಭುತ್ವದಲ್ಲಿ ಇದು ಕೂಡದು. ತಮಗೇ ಅರ್ಥವಾಗಬಹುದು ಅಧಿಕಾರಿಗಳಲ್ಲಿದ್ದ ಅಧಿಕಾರ ವಿಕೇಂದ್ರೀಕೃತವಾಬೇಕೇ ಹೊರತು ಒಬ್ಬ ಅಧಿಕಾರಿಯಲ್ಲಿ ಇಷ್ಟೊಂದು ಅಧಿಕಾರ ಕೇಂದ್ರೀಕೃತವಾಗುವುದು ಅಷ್ಟು ಸರಿಯಲ್ಲ ಎಂದು ನನ್ನ ಅಭಿಪ್ರಾಯ. ಕಾಂಪೌಂಡ್ ಮಾಡತಕ್ಕ ಅಧಿಕಾರ ಖಂಡಿತವಾಗಿಯೂ ಕೊಡಕೂಡದು, ಏಕೆಂದರೆ ಅವರು ತಮಗೆ ಬೇಕಾದವರಿಗೆ ಕಾಂಪೌಂಡ್ ಮಾಡುತ್ತಾರೆ ಬೇಕಿಲ್ಲದವರಿಗೆ ಮಾಡುವುದಿಲ್ಲ. ಕೆಲವು ಸಂದರ್ಭದಲ್ಲಿ 6 ತಿಂಗಳು ಕಠಿಣ ಶಿಕ್ಷೆ 500 ರೂಪಾಯಿ ಜುಲ್ಮಾನೆ ಹಾಕತಕ್ಕ ಅಧಿಕಾರ ಕೊಟ್ಟಿದ್ದೀರಿ. ಇದು ಖಂಡಿತವಾಗಿಯೂ ಇರಕೂಡದು. ತೆಗೆದು ಬಿಡಬೇಕು, 5 ರೂಪಾಯಿ, 10 ರೂಪಾಯಿ, 50 ರೂಪಾಯಿ ಜುಲ್ಮಾನೆ ಹಾಕಬಹುದೇ ವಿನಃ 500 ರೂಪಾಯಿ ಜುಲ್ಮಾನೆ ಎಂದರೆ ಅಷ್ಟು ಜುಲ್ಮಾನೆ ಕೊಡಬೇಕಾದಂತಹ ಕಠಿಣವಾದ ತಪ್ಪು ಮಾಡುವಾರು ಎಂದು ನಾನು ಅಭಿಪ್ರಾಯಪಡುತ್ತೇನೆ. ಆದ್ದರಿಂದ ಈ ಪೆನಾಲ್ಟಿ ಕ್ಲಾಸ್‌ನಲ್ಲಿ 6 ತಿಂಗಳು ಶಿಕ್ಷೆಯನ್ನು ತೆಗೆದು ಹಾಕಿ 500 ರೂಪಾಯಿ ಜುಲ್ಮಾನೆಯನ್ನು 100 ರೂಪಾಯಿಗೆ ಇಳಿಸಬೇಕೆಂದು ಹೇಳುತ್ತೇನೆ.

